ವಿಧಾನ ಮಂಡಲದಿಂದ ಮಾಡಲಾದ ಕಾನೂನಿನಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸರ್ಕಾರಿ ಆದೇಶಗಳನ್ನು ಹೊರಡಿಸಲಾಗುತ್ತದೆ. ಈ ವಿಷಯವನ್ನು ದಿನಾಂಕ 20-9-1991ರಂದು ಸದನದಲ್ಲಿ ಎತ್ತಿದಾಗ ಸನ್ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಸರ್ಕಾರಿ ಆದೇಶಗಳು ರಹಸ್ಯ ದಸ್ತಾವೇಜುಗಳಲ್ಲವೆಂದು ಮತ್ತು ಅವುಗಳನ್ನು ರಹಸ್ಯವಾಗಿ ಇರಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ಹಾಗೂ ಸನ್ಮಾನ್ಯ ಸದಸ್ಯರಿಗೆ ಸರ್ಕಾರಿ ಆದೇಶಗಳ ಪ್ರತಿಗಳು ದೊರಕುವಂತೆ ತಾವು ಪ್ರಯತ್ನಿಸುವುದಾಗಿಯೂ ತಿಳಿಸಿದರು. ಈ ಸಂದರ್ಭದಲ್ಲಿ ಸರ್ಕಾರಿ ಆದೇಶಗಳ ಪ್ರತಿಗಳನ್ನು ನೀಡಬೇಕೆಂಬ ನನ್ನ ಸಚಿವಾಲಯದ ಕೋರಿಕೆಯನ್ನು ನೆರವೇರಿಸದೆ ವಿಷಯವನ್ನು ಅನಗತ್ಯವಾಗಿ ವಿಳಂಬಗೊಳಿಸಲು ಪ್ರಯತ್ನಿಸುತ್ತಿರುವ ಮತ್ತು ಅನಗತ್ಯವಾಗಿ ಪತ್ರವ್ಯವಹಾರ ನಡೆಸುತ್ತಿರುವ ನೀರಾವರಿ ಇಲಾಖೆಯ ಕಾರ್ಯದರ್ಶಿಯವರ ನಿಲುವನ್ನು ಗಂಭೀರವಾಗಿ ಪರಿಗಣಿಸಬೇಕು. ಕಾರ್ಯದರ್ಶಿಯವರ ಇಂಥ ವರ್ತನೆಯನ್ನು ತಡೆಯಲು ಈ ಸದನದ ವಿಶೇಷ ಹಕ್ಕನ್ನು ಚಲಾಯಿಸಿ ಶಿಕ್ಷೆ ವಿಧಿಸಬಹುದಾಗಿದೆ ನೀರಾವರಿ ಇಲಾಖೆಯ ಕಾರ್ಯದರ್ಶಿಯವರು ಬಹುಶಃ ವಿಷಯದ ಗಾಂಭೀರ್ಯವನ್ನು ಅರಿಯದೆ ಮತ್ತು ಆದರಿಂದಾಗುವ ಪರಿಣಾಗಳ ಬಗ್ಗೆ ಯೋಚಿಸದೆ ನನ್ನ ಸಚಿವಾಲಯದ ಕೋರಿಕೆಯನ್ನು ಒಂದು ಸಾಮಾನ್ಯ ವಿಷಯವೆಂಬಂತೆ ಪರಿಗಣಿಸಿದ್ದಾರೆ.

ಸಂಬಂಧಪಟ್ಟ ಅಧಿಕಾರಿಯು ಇದನ್ನು ಪುನರಾವರ್ತಿಸದಿರುವಂತೆ ಮತ್ತು ಕೋರಿಕೆಯನ್ನು ಸಲ್ಲಿಸಿದಾಗಲೆಲ್ಲಾ ನನ್ನ ಸಚಿವಾಲಯಕ್ಕೆ ಸರ್ಕಾರಿ ಆದೇಶಗಳ ಪ್ರತಿಗಳನ್ನು ತಕ್ಷಣ ಒದಗಿಸುವಂತೆ ಎಚ್ಚರಿಕೆ ನೀಡಿ ವಿಷಯವನ್ನು ಇಲ್ಲಿಗೆ ಮುಕ್ತಾಯ ಗೊಳಿಸಬಹುದೆಂದು ನನ್ನ ಅಭಿಪ್ರಾಯ. ಸರ್ಕಾರಿ ಆದೇಶಗಳು, ಸರ್ಕಾರಿ ರಹಸ್ಯ ಅಧಿನಿಯಮ (ಆಫಿಷಿಯಲ್ ಸೀಕ್ರೆಟ್ ಆಕ್ಟ್) ದಲ್ಲಿ ಸೇರಿದ್ದ ಹೊರತು ಸರ್ಕಾರಿ ಆದೇಶಗಳ ಪ್ರತಿಗಳನ್ನು ಕೋರಿದಾಗಲೆಲ್ಲಾ ನನ್ನ ಸಚಿವಾಲಯಕ್ಕೆ ಒದಗಿಸಬೇಕೆಂದು ಸಹ ಸರ್ಕಾರದ ಎಲ್ಲಾ ಕಾರ್ಯದರ್ಶಿಗಳಿಗೆ ಸನ್ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಸೂಚನೆಗಳನ್ನು ಹೊರಡಿಸಬೇಕಾಗಿ ಕೋರುತ್ತೇನೆ.

ಈ ವಿಷಯದ ಬಗ್ಗೆ ಸದನದ ಮಧ್ಯಪ್ರವೇಶ ಅಗತ್ಯವಿಲ್ಲವೆಂದು ಮತ್ತು ಇದನ್ನು ಇಲ್ಲಿಗೆ ಮುಕ್ತಾಯಗೊಳಿಸಬಹುದೆಂದು ನನ್ನ ಅಭಿಪ್ರಾಯ.

ಆದ್ದರಿಂದ ಸನ್ಮಾನ್ಯ ಸದಸ್ಯರಾದ ಶ್ರೀ ಏಕಾಂತಯ್ಯರವರು ನೀಡಿರುವ ನೋಟೀಸಿಗೆ ಕರ್ನಾಟಕ ವಿಧಾನ ಸಭೆಯಲ್ಲಿ ಕಾರ್ಯವಿಧಾನ ಮತ್ತು ಕಾರ್ಯಕಲಾಪಗಳ ನಿಯಮಗಳ 190ನೇ ನಿಯಮದ ಅಡಿಯಲ್ಲಿ ನನ್ನ ಒಪ್ಪಿಗೆಯನ್ನು ತಡೆಹಿಡಿಯುತ್ತೇನೆ.

ನಿಯಮ 68ರ ಮೇರೆಗೆ

ವಿಷಯ: ಸರ್ಕಾರವು ಇತ್ತೀಚೆಗೆ ಕೇತಮಾರನಹಳ್ಳಿ ಸರ್ವೆ ನಂಬರ್ 174 ಮತ್ತು 175 ರಲ್ಲಿ ಭೂಸ್ವಾಧೀನದ ಬಗ್ಗೆ ಹೊರಡಿಸಿರುವ ಆದೇಶವನ್ನು ಹಿಂತೆಗೆದುಕೊಂಡಿರುವ ಬಗೆ

5.30 ಪಿ.ಎಂ

+ ಶ್ರೀ ಕೆ.ಹೆಚ್. ರಂಗನಾಥ್ (ಹಿರಿಯೂರು): ಮಾನ್ಯ ಅಧ್ಯಕ್ಷರೇ ಎಲ್ಲಿ ನನಗೆ ಅವಕಾಶ ದೊರೆಯುವುದಿಲ್ಲವೋ ಹಾಗೆ ಅಂತ ಹೇಳಿ ಭಾವಿಸಿದ್ದೆ. ತಾವು ಅವಕಾಶ ಮಾಡಿ ಕೊಟ್ಟಿದ್ದೀರಿ. ಅದಕ್ಕಾಗಿ ನನ್ನ ವಂದನೆಗಳು ತಮಗೆ ಈ ವಿಷಯವನ್ನು ಎತ್ತಿದಾಗ ರೂಲ್ 68ರ ಕೆಳಗೆ ನಾನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಡಬೇಕೆಂದಾಗ ತಾವು ಒಂದು ಮಾತನ್ನು ಹೇಳಿದ್ದಿರಿ. ಏನೆಂದರೆ

ಈಗಾಗಲೇ ಅವಿಶ್ವಾಸ ನಿರ್ಣಯ ಬಂದಾಗ ಇದು ಪ್ರಸ್ತಾಪ ಆಗಿದೆ.ಹಾಗೆ ಅಂತ ಹೇಳಿ. ಆದರೆ ಈ ವಿಷಯಕ್ಕೂ ಅದಕ್ಕೂ ಸ್ವಲ್ಪ ವಿಷಯ ಬೇರೆ ಆಗಿರುವುದರಿಂದ ನಮಗೆ ಅವಕಾಶ ಮಾಡಿಕೊಡಬೇಕೆಂದು ಹಾಗೆ ಅಂತ ಹೇಳಿ ನಾನು ತಮ್ಮಲ್ಲಿ ರೂಲನ್ನು ಪ್ರಸ್ತಾಪ ಮಾಡಿದ್ದೆ. ಸ್ವಾಮಿ ಮಾನ್ಯ ಮುಖ್ಯಮಂತ್ರಿಗಳು ಅವರೇ ಸ್ವತಃ ಉತ್ತರ ಕೊಡುವಾಗ ಪ್ರಸ್ತಾಪ ಮಾಡಿದ ವಿಷಯ ಅಲ್ಲದೆ ಸ್ವಯಂ ಪ್ರೇರಿತರಾಗಿ ಸುಮೋ ಮೋಟೋ ಒಂದು ವಿವರಣೆಯನ್ನು ಸಹ ಕೊಟ್ಟರು ಅದು ಪತ್ರಿಕೆಗಳಲ್ಲಿ ಬಂದಿದೆ. ನಾನು ಆ ದಿವಸ ಅದನ್ನು ಕೇಳುವುದಕ್ಕೆ ಈ ಮನೆಯಲ್ಲಿರಲಿಲ್ಲ, ಅದನ್ನು ನಾನು ಓದಿದ ಮೇಲೆ ನನಗೆ ಆ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕು ಹಾಗೆ ಅಂತ ಹೇಳಿ ನನಗೆ ಅನಿಸಿತು. ಆದರಿಂದಾಗಿ ನಾನು ಇವತ್ತು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇದೊಂದು ವಿಚಿತ್ರವಾದಂತಹ ಪ್ರಸಂಗ.

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಬಿ.ಡಿ.ಎ.ಗೆ. ಬೆಂಗಳೂರಿನ ನಾಗರೀಕರಿಗಾಗಿ ಮೀಸಲಾಗಿಟ್ಟಿರತಕ್ಕಂಥ ಜಾಗಗಳನ್ನು ವಿತರಣೆ ಮಾಡಿದ ಮೇಲೆ ಯಾವ ಪ್ರಮಾಣದಲ್ಲಿ ನಾಗರೀಕರು ಕಷ್ಟಕ್ಕೆ ಒಳಗಾಗಿದ್ದಾರೆ. ಎಂಬುದು ಈ ಒಂದು ವಿಷಯ ಸವಿಸ್ತಾರವಾಗಿ ತಿಳಿಸುತ್ತೇನೆ. ಮಹಾಲಕ್ಷ್ಮಿ ಲೇಔಟ್ ಭಾಗದಲ್ಲಿ ಮಹಾಲಕ್ಷ್ಮೀ ಲೇ ಔಟ್ ಎಕ್ಸ್‌ಟೆನ್‌ಷನ್ ಹಾಗೆ ಅಂತ ಹೇಳಿ ಏನು ಕರೆದಿದ್ದಾರೆ ಆ ಭಾಗದಲ್ಲಿ ಸರ್ವೆ ನಂಬರು 174 ಮತ್ತು 175 ಅವುಗಳನ್ನು 1975ನೇ ಇಸವಿಯಲ್ಲಿ ಸ್ವಾಧೀನ ಮಾಡಬೇಕು ಅಂತ ಹೇಳಿ ಪ್ರಾರಂಭಮಾಡಿ 1977ನೇ ಇಸವಿಯಲ್ಲಿ ಅಕ್ವಿಜೀಶನ್ ಆಗಿ ತದನಂತರ ಒಂದು ಲೇಔಟ್ ಮಾಡುತ್ತಾರೆ. ಲೇಔಟ್ ಅನ್ನು ಮಾಡಿದ ಮೇಲೆ ಅಲ್ಲಿ ಸುಮಾರು 198 ಸೈಟ್‌ಗಳನ್ನು ಮಾಡುತ್ತಾರೆ 198 ಸೈಟ್‌ಗಳಲ್ಲಿ 170 ಸೈಟ್‌ಗಳನ್ನು ವಿಲೇ ಮಾಡಿದ್ದಾರೆ ಹೀಗೆ ಒಂದು ಪ್ರಸಂಗ ನಡೆದಿದೆ. ಈ ಒಂದು ವಿಚಾರವನ್ನು ನಾನು ಏನು ಪ್ರಸ್ತಾಪ ಮಾಡುತ್ತಿದ್ದೇನೆ ಇದು ಅಧಿಕಾರಿಗಳು ಎಷ್ಟು ದೂರದವರೆಗೂ ಹೋಗಿ ಸಾರ್ವಜನಿಕರಿಗೆ ತೊಂದರೆ ಕೊಡುತ್ತಾರೆ ಸಾರ್ವಜನಿಕರನ್ನು ಕೋರ್ಟ್ ಕಛೇರಿ ಹತ್ತುವ ರೀತಿಯಲ್ಲಿ ಮಾಡುತ್ತಾರೆ ಕೋರ್ಟ್‌ಗಳ ತೀರ್ಮಾನಗಳನ್ನು ತಮ್ಮದೇ ಆದಂತಹ ರೀತಿಯಲ್ಲಿ ಅದನ್ನು ನಿರರ್ಥಕಗೊಳಿಸುತ್ತಾರೆ ಎನ್ನುವುದಕ್ಕೆ ನಾನು ಪ್ರಸ್ತಾಪ ಮಾಡತಕ್ಕಂಥ ವಿಚಾರ ಒಂದು ಉದಾಹರಣೆಯಾಗಿ ನನಗೆ ಸ್ವಲ್ಪ ವಕೀಲನಾಗಿ ಕೆಲಸ ಮಾಡಿ ಕಾನೂನಿನ ಕೆಲವು ಅನುಭವ ಕೂಡ ನನಗೆ ಇದೆ ಇವತ್ತು ಸುಪ್ರೀಂ ಕೋರ್ಟಿಗೆ ಹೋಗಿ ರಾಜ್ಯದ ಉಚ್ಚ ನ್ಯಾಯಾಲಯಕ್ಕೆ ಹೋಗಿ ಅದರ ಮೇಲೆ ಮತ್ತೆ ಅಪೀಲು ತದನಂತರ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ಅಲ್ಲಿಗೆ ಹೋಗಿ ಅಲ್ಲಿ ಅಕ್ವಿಜೀಶನ್ ಕಾನೂನು ಪ್ರಕಾರ ಆಗಿದೆ ಸರಿಯಾಗಿದೆ ಜಮೀನನ್ನು ಸೈಟ್‌ಗಳಾಗಿ ಮಾಡಿ ವಿಲೇವಾರಿ ಏನು ಮಾಡಿದ್ದಾರೆ ಅದು ಸರಿಯಾಗಿದೆ ಅದನ್ನು ಅವರಿಗೆ ಹಂಚಿ ಕೊಡಬೇಕೆಂದು ಹಾಗೆ ಅಂತ ಹೇಳಿ 1987ನೇ ಇಸವಿಯ ಸುಮಾರಿನಲ್ಲಿ ಒಂದು ತೀರ್ಮಾನ ಬರುತ್ತದೆ. ಅಕ್ವಿಜಿಶನ್ 1975ರಲ್ಲಿ ಆಗಿ 1977ರಲ್ಲಿ ಕೊನೆ ಆಗುತ್ತದೆ ಆ ಅಕ್ವಿಜಿಶನ್ ಲೇಔಟ್ ಮಾಡಲು ಸರ್ಕಾರದಿಂದ 1976ರಲ್ಲಿ ಈ ಸ್ಕೀಮ್ ಸರಿ ಆಗಿದೆ ಹಾಗೆ ಎಂದು ಹೇಳಿ ಮಂಜೂರಾಗುತ್ತದೆ ಮತ್ತೆ ಈ ಸ್ಕೀಮ್ ಸರಿಯಾಗಿಲ್ಲ ಎಂದು ಹೇಳಿ ಪ್ರಶ್ನೆ ಮಾಡುತ್ತಾರೆ ಅಂದರೆ ಅದರ ಮಾಲೀಕರು ಅಂದು ಯಾರಿಗೆ ಸೇರಿತ್ತೋ ಆ ಮಾಲೀಕರು ಸುಪ್ರೀಂ ಕೋರ್ಟಿನಲ್ಲಿ ಈ ಅಕ್ವಿಜಿಶನ್ ಸರಿಯಾಗಿದೆ ಇವರಿಗೆ ಜಮೀನು ಕೊಡಬೇಕು ಹಾಗೆ ಎಂದು ಹೇಳುತ್ತಾರೆ.

ಸರ್ವೋಚ್ಚ ನ್ಯಾಯಾಲಯದಲ್ಲಿ ಅದೃಷ್ಟವಷಾತ್ ನಮ್ಮ ರಾಜ್ಯದ ನ್ಯಾಯಾಧೀಶರು ಶ್ರೀ ಇ.ಎಸ್. ವೆಂಕಟರಾಮಯ್ಯನವರು ಮತ್ತು ಅವರ ಜೊತೆಗೆ ಕೆ.ಎನ್.ಸಿಂಗ್ ಅವರು, ಅವರು ಇನ್ನೂ ಚೀಫ್ ಜಸ್ಟೀಸ್ ಆಗುವುದಕ್ಕಿಂಥ ಪೂರ್ವದಲ್ಲಿ ಅವರ ಮುಂದೆ ಇದು ಒಂದು ಇದು ಸರಿಯಾಗಿದೆ ಭೂ ಮಾಲೀಕರು ಏನು ಅಪೀಲನ್ನು ಹಾಕಿದ್ದಾರೆ. ಅದರಲ್ಲಿ ಏನೂ ತಿರುಳಿಲ್ಲ ಇವರಿಗೆ ಜಾಗ್ರತೆಯಾಗಿ ಸ್ವಾದೀನ ಕೊಟ್ಟು ಅವರು ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು 1987ರ ಸುಮಾರಿನಲ್ಲಿ ಸುಪ್ರೀಮ್ ಕೋರ್ಟ್ ಹೇಳುತ್ತದೆ. ಮತ್ತೆ 87 ಆದ ಮೇಲೆ ಒಂದು ಹೊಸ ತಿರುವು ಪ್ರಾರಂಭವಾಗುತ್ತದೆ. ಅದು ಬಿ.ಡಿ.ಎ. ಆಫೀಸ್‌ನಲ್ಲಿ ಪ್ರಾರಂಭವಾಗಿ ಅದಕ್ಕೆ ಒಂದು ಹೊಸ ರೂಪ ಕೊಟ್ಟು ಇನ್ನೂ ನಮ್ಮ ಸ್ವಾಧೀನದಲ್ಲಿ ಇದೆ ಎಂಬ ಮಾತನ್ನು ಹೇಳುತ್ತಾರೆ ಸುಪ್ರೀಮ್ ಕೋರ್ಟ್ ಅಕ್ವಿಸಿಷನ್ ಸರಿಯಾಗಿದೆ ಸುಮಾರು 29 ಲಕ್ಷ ರೂಪಾಯಿಗಳನ್ನು ಬಿ.ಡಿ.ಎ. ನವರು ಡೆಪಾಸಿಟ್ ಮಾಡಿದ್ದಾರೆ. ಯಾವ ಮಾಲೀಕರಿಗೆ ಸೇರಬೇಕೋ ಅವರಿಗೆ ಇನ್ನು ಈ ಭೂಮಿಯನ್ನು ಜಾಗ್ರತೆ ಹಂಚಿಕೊಡಬೇಕು ಎಂದು ಹೇಳಿದ ಮೇಲೆ ಮತ್ತೆ ಯಾವುದೋ ನೆಪ ಹಾಕಿ ಒಂದು ಅರ್ಜಿ ಹಾಕುತ್ತಾರೆ. 1989 ರಲ್ಲಿ ಹಾಕಿದಂಥ ಅರ್ಜಿ ಹಿಂದಿನ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಬಿ.ಡಿ.ಎ.ನಲ್ಲಿ ಒಂದು ರೆಸಲ್ಯೂಷನ್ ಮಾಡುತ್ತಾರೆ. ರೆಸಲ್ಯೂಷನ್‌ನಲ್ಲಿ ಬಲ್ಕ್ ಅಲಾಟ್ ಮಾಡಬೇಕೆಂದು ಹೇಳಿ ಅದರಿಂದ ನಿರಾಶರಾದ ಈ ಜಾಗದ ಹಂಚಿಕೆದಾರರು ಏನಿದ್ದಾರೆ ಅವರು ಕೋರ್ಟ್‌ಗೆ ಹೋಗುತ್ತಾರೆ. ಅಂದರೆ ಈ ಜಾಗ ಯಾರಿಗೆ ಹಂಚಿಕೆ ಆಗಿತ್ತೋ ಅವರು ಕೋರ್ಟಿಗೆ ಹೋಗುತ್ತಾರೆ. ಅಲ್ಲೂ ಕೂಡಾ ಅವರಂತೆ ಆಗುತ್ತದೆ. ಸಿವಿಲ್ ಕೋರ್ಟಿಗೆ ಹೋಗಿದ್ದಾರೆ. ಅಲ್ಲೂ ಕೂಡಾ ಅವರಂತೆ ಆಗಿದೆ. ಇನ್‌ಜಂಕ್ಷನ್ ತೆಗೆದುಕೊಂಡಿದ್ದಾರೆ. ಇನಕ್ಷನ್‌ನ್ನು ಕೋರ್ಟ್‌ನವರು ತೆಗೆದಿದ್ದಾರೆ. ಇಷ್ಟೆಲ್ಲಾ ಆದಮೇಲೆ ಸುಮಾರು 89-90 ಸುಮಾರಿನಲ್ಲಿ ಗೌರ್‍ನರ್‌ರವರ ಆಡಳಿತ ಬರುತ್ತದೆ. ಮತ್ತೆ ಅವರ ಮುಂದೆ ಅರ್ಜಿಯನ್ನು ಕೊಟ್ಟು ಪ್ರಸ್ತಾಪ ಮಾಡುತ್ತಾರೆ. ಹೊಸ ಹೊಸ ಸರ್ಕಾರ ಬಂದಹಾಗೆಲ್ಲಾ ಇವರು ಒಂದು ಅರ್ಜಿ ಕೊಡುತ್ತಾ ಹೋಗುತ್ತಾರೆ. ಅರ್ಜಿ ಕೊಟ್ಟ ಮೇಲೆ ಅಲ್ಲಿ ಗೌರ್‍ನರವರ ಕಾಲದಲ್ಲಿ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯಕ್ಕೆ ಅಂದರೆ ಇದನ್ನು ರೀ ಕನ್ವೆ ಮಾಡಬಹುದೇ ಎಂದು ಕೇಳುತ್ತಾರೆ. ರೀ ಕನ್ವೆ ಮಾಡುವುದಕ್ಕಾಗುವುದಿಲ್ಲವೆಂದು ಅಡ್ವೋಕೇಟ್ ಜನರಲ್‌ರವರು ಹೇಳುತ್ತಾರೆ. ಗೌರ್‍ನರ್‌ರವರು ನಿರ್ಣಯ ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿ ಇನ್ನೇನು ಚುನಾವಣೆಯಾಗುತ್ತದೆ ಚುನಾಯಿತ ಸರ್ಕಾರ ಬರುತ್ತದೆ. ಆ ಸರ್ಕಾರದವರೇ ಈ ಬಗ್ಗೆ ತೀರ್ಮಾನ ಕೊಡಲೆಂದು ಹೇಳಿ ಅದು ಅಲ್ಲಿಗೇ ನಿಲ್ಲುತ್ತದೆ. ಮತ್ತೆ ಚುನಾವಣೆಯಾದ ಮೇಲೆ ಮಾನ್ಯ ವೀರೇಂದ್ರ ಪಾಟೀಲರು ಅಧಿಕಾರಕ್ಕೆ ಬರುತ್ತಾರೆ. ಅವರು ಮುಂದೆ ಕೂಡ ಈ ವಿಷಯ ಬರುತ್ತದೆ. ಬಂದಾಗ, ಇದನ್ನೆಲ್ಲಾ ನೋಡಿದಾಗ ಸರ್ಕಾರ ಒಂದು ಅಂತಿಮ ತೀರ್ಮಾನಕ್ಕೆ ಬರುತ್ತದೆ. ಮಾನ್ಯ ವೀರೇಂದ್ರಪಾಟೀಲರ ಕೈಯಲ್ಲಿ ಬಿ.ಡಿ.ಎ. ಖಾತೆ ಇರುತ್ತದೆ. ಅವರು ಹೇಳುತ್ತಾರೆ. ರಿಜೆಕ್ಟ್ ಮಾಡುತ್ತಾರೆ. ಇದಾದ ಮೇಲೆ ಏನು ಇವರು, ಜಾಗ ಯಾರಿಗೆ ಹಂಚಿಕೆ ಆಗಿತ್ತು? ಅವರು ಮನೆಗಳನ್ನು ಕಟ್ಟಿಕೊಳ್ಳತಕ್ಕಂಥ ಕಾಲದಲ್ಲಿ ನಮ್ಮ ಹೆಚ್.ಯು.ಡಿ. ಕಮೀಷನರ್‌ರವರ ಆಫೀಸ್‌ನಿಂದ ಡಿಸೆಂಬರ್ 90ರ ಸುಮಾರಿಗೆ ದಿಢೀರ್ ಆಗಿ ಒಂದು ಆಜ್ಞೆ ಬರುತ್ತದೆ. ಏನು ಅಂಥ ಅಂದರೆ, ಅದು ಒಂದು ವಿಚಿತ್ರವಾದಂಥ ಆದೇಶ. ಇದು 12-12-1990ರಂದು ಬರುತ್ತದೆ.

"Acquisition of lands-de-notifying the lands in Survey No.174 and 175 of Kethamaranahalli in favour of Mohan Meakins Limited."

Ref : DO Letter RDA.224/89-90 dt 17-10-1989.

The case on the above subject is posted for hearing on the 19th December 1990 at 4 p.m. before the Secretary-II, Housing and Urban Development in Room No.447, 4th floor, M.S.buildings, Bangalore. M/s. Mohan Meakins Limited has been requested to appear before the Secretary on the said date and time".

ಇಲ್ಲಿ ಎರಡನೆಯದು ಬಹಳ ಪ್ರಮುಖವಾಗಿರತಕ್ಕಂಥ ವಿಚಾರ. This particular letter which I am reading now is signed by the Under Secretary. It reads :

I am therefore directed to state that " till the Govt. passes or pass and order till the Govt. takes a decision on this case, further proceedings & action by Bangalore Development Authority are hereby stayed in respect of the above survey numbers."

ಯಾವ ಕಾನೂನಿನ ಕೆಳಗೆ ಈ ಸ್ಟೇ ಮಾಡಿದ್ದಾರೋ ನನಗೆ ಅರ್ಥ ಆಗುವುದಿಲ್ಲ ಎಲ್ಲಿ ಅವರಿಗೆ ಈ ಅಧಿಕಾರ ದೊರೆಯುತ್ತದೋ ನನಗೆ ಗೊತ್ತಾಗುವುದಿಲ್ಲ. ನನ್ನ ಹತ್ತಿರ ಬಿಡಿಎ ಆಕ್ಟ್, ಲ್ಯಾಂಡ್ ಅಕ್ವಿಸಿಷನ್ ಆಕ್ಟ್ ಇದೆ. ಈ ಡೈರೆಕ್ಷನ್ಸ್ ಕೊಡುತ್ತಾರೆ. It says "The Commissioner, BDA is also requested to be present at the time of hearing of this case on 19-12-90 at 4 p.m. "ಎಂದು ಇದನ್ನು ಬಿಡಿಎ ನವರು ಮತ್ತು ಸಂಬಂಧಪಟ್ಟವರು ಅವರು ಮನೆ ಕಟ್ಟುತ್ತಾ ಇರತಕ್ಕವರು. ಅರ್ಜಿದಾರರು ಏನು ಇಷ್ಟು ಪ್ರಯತ್ನ ಪಟ್ಟಿದ್ದಾರೆ, ಸುಮಾರು 78ರ ನಂತರ, ಅಕ್ವಿಸಿಷನ್ ಬಗ್ಗೆ ಸಹ ನಾನು ಪೂರಾ ಜಡ್ಜ್‌ಮೆಂಟ್ ಓದುವುದಕ್ಕೆ ಹೋಗುವುದಿಲ್ಲ. ನನ್ನ ಹತ್ತಿರ ಕೆಲವು ಕಾಪಿಗಳು ಇವೆ. ವಾಲಂಟರಿಯಾಗಿ ಯಾರು ಈ ಭೂ ಮಾಲೀಕರು ಇದ್ದರು. ಯಾರು ಅಕ್ವಿಸಿಷನ್ ಅನ್ನು ಪ್ರಶ್ನೆ ಮಾಡಿದ್ದರು, ಅವರೇ ಸ್ವಯಂ ಪ್ರೇರಿತರಾಗಿ ಅವರ ಸ್ವಾಧೀನವನ್ನು ಅವರಿಗೆ ಬಿಡಿಎ ನವರು ಕೊಟ್ಟಿದ್ದಾರೆ. ಅದರ ಉಲ್ಲೇಖವೂ ಕೂಡ ಲ್ಯಾಂಡ್ ಅಕ್ವಿಸಿಷನ್ ಅನ್ನು ಏನು ಪ್ರಶ್ನೆ ಮಾಡಿದ್ದಾರೆ? ಆ ಜಡ್ಜ್‌ಮೆಂಟ್ ಅಂದರೆ ಮೊದಲು ಸಿಂಗಲ್ ಜಡ್ಜ್ ಮುರಳೀಧರ್ ಎಂತ ಹೇಳಿ ಅವರ ಜಡ್ಜ್‌ಮೆಂಟಿನಲ್ಲಿ ಉಲ್ಲೇಖ ಆಗಿದೆ. ಅಪೀಲ್‌ನಲ್ಲಿ ಉಲ್ಲೇಖ ಆಗಿದೆ. ಸ್ವಯಂಪ್ರೇರಿತರಾಗಿ ಕೊಟ್ಟ ಮೇಲೂ ಸಹ ಇನ್ನೇನು ಮನೆ ಕಟ್ಟುತ್ತಾ ಇರುತ್ತಾರೆ, ಕಟ್ಟುವಾಗ ನಿಲ್ಲಿಸತಕ್ಕದ್ದಕ್ಕೆ ಈ ಒಂದು ಆದೇಶ ದೊರೆತು, ತದನಂತರ 27.12ರಲ್ಲಿ ಒಂದು ಆರ್ಡರ್ ಪಾಸ್ ಆಗಿದೆ. ಅದೇ ಬಹಳ ಪ್ರಮುಖವಾಗಿರತಕ್ಕ ಆರ್ಡರ್. ಬಹಳ ಮಟ್ಟಿಗೆ ಮುಖ್ಯಮಂತ್ರಿಗಳಿಗೆ ಈ ಆರ್ಡರನ್ನು ಸಂಬಂಧಪಟ್ಟ ಸೆಕ್ರೆಟರಿಗಳು, ಕಮೀಷನರ್ ಅವರು ತೋರಿಸಿದ್ದಾರೋ ನನಗೆ ಗೊತ್ತಿಲ್ಲ. ಈ ಆರ್ಡರನ್ನು ಸೆಕ್ಷನ್ 63 ಪ್ರಕಾರ, ಬಿಡಿಎ ಲ್ಯಾಂಡ್ ಆಕ್ಟ್‌ನ 63ರ ಪ್ರಕಾರ ಈ ಅರ್ಜಿ ತೆಗೆದುಕೊಂಡು ಅದನ್ನು ರಿವಿಜನ್ ಅರ್ಜಿ ಎಂದು ಪರಿಗಣಿಸಿ ಒಂದು ಜಡ್ಜ್‌ಮೆಂಟನ್ನು ಬರೆದಿದ್ದಾರೆ. ನಾನು ತಮ್ಮ ಗಮನಕ್ಕೆ ಸಭೆಯ ಗಮನಕ್ಕೆ ಇದನ್ನು

ತರುತ್ತಿದ್ದೇನೆ. ನಾನು ಅದಕ್ಕೆ ಪ್ರಸ್ತಾಪ ಮಾಡುತ್ತಾ ಹೇಳಿದೆ. ಯಾವ ರೀತಿ ಅಧಿಕಾರಿಗಳು ಇವತ್ತಿನ ದಿವಸ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟನ್ನು ಕೂಡ ,ನಿರರ್ಥಕಗೊಳಿಸತಕ್ಕ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯ ಎನ್ನುವುದಕ್ಕೆ ಇದೊಂದು ನಿದರ್ಶನವಾಗಿರತಕ್ಕ ಒಂದು ವಿಷಯ. ಬಿಡಿಎ ಆಕ್ಟ್‌ನ 63ರಲ್ಲಿ ರಿವಿಜನ್ ಸೆಕ್ಷನ್ ಇದೆ.

Section 63 of BDA Act reads :" The Government may call for records of any proceedings of the Authority or any Officers subordinate to the Authority".

ಇವರು ಒಂದು ಅರ್ಜಿ ಕೊಟ್ಟಿದ್ದಾರೆ. ನಮಗೆ ಸ್ವಾಧೀನ ಕೊಡಿ. ವಾಪಸ್ ಕೊಡಿ ಎಂದು ಹೇಳಿ. ಅಕ್ವಿಸಿಷನ್ ಆಗಿದೆ. ಅಕ್ವಿಸಿಷನ್ ಆದ ಮೇಲೆ ಅಕ್ವಿಸಿಷನ್ ಆಕ್ಟ್‌ನ ಕೆಳಗಡೆ, ಸೆಕ್ಷನ್ 48ರ ಕೆಳಗೆ ಮಾತ್ರ ವಿತ್‌ಡ್ರಾ ಮಾಡುವುದಕ್ಕೆ ಸಾಧ್ಯ ಇದೆಯೇ ಹೊರತು, ಬಾಕಿ ಮಾಡುವುದಕ್ಕೆ ಸಾಧ್ಯ ಇಲ್ಲ. ಇವರು ಅರ್ಜಿಯನ್ನು 63ರ ಸೆಕ್ಷನ್‌ನಲ್ಲಿ ತೆಗೆದುಕೊಂಡು, ಅದನ್ನು ರಿವಿಜನ್ ಅರ್ಜಿ ಎಂದು ಪರಿಗಣಿಸಿ ಹೋಲ್ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಸುಪ್ರೀಂ ಕೋರ್ಟಿನಲ್ಲಿ ಏನು ಆಗಿತ್ತು ಅದನ್ನು ನಿರರ್ಥಗೊಳಿಸತಕ್ಕ ರೀತಿಯಲ್ಲಿ ಇವತ್ತು ಅಕ್ವಿಸಿಷನ್ ಅನ್ನು ವಿತ್‌ಡ್ರಾ ಮಾಡಿದ್ದಾರೆ.

under the Section 48 of the land acquisition Act ಇದಕ್ಕಿಂತ ಕಾನೂನಿನ ದುರುಪಯೋಗ ಯಾವುದೇ ಕಾನೂನಿನಲ್ಲಿ ಎಲ್ಲಿಯಾದರೂ ಆಗಿರುವುದನ್ನು ನಾವು ನೋಡುವುದಿಲ್ಲ. ಒಬ್ಬ ಕಮೀಷನರ್, ಒಬ್ಬ ಸೆಕ್ರೆಟರಿ ಈ ಮಟ್ಟಕ್ಕೆ ಹೋಗುವುದಾದರೆ ನಾವು ಇದನ್ನು ಏನೆನ್ನಬೇಕಾಗುತ್ತದೆ. ಈಗ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ ಬಹಳ ಸಂತೋಷ. ಇದನ್ನು ತಾವು ಲಘುವಾಗಿ ನೋಡತಕ್ಕದ್ದಲ್ಲ. ಇದರ ವಿವರ ತರಿಸಿಕೊಳ್ಳಬೇಕಾಗುತ್ತದೆ. ಎಲ್ಲ ದಾಖಲಾತಿಗಳನ್ನು ಸರಿಯಾಗಿ ನೋಡಬೇಕಾಗುತ್ತದೆ. ಹಾಗಾದರೆ ಜನ ಏತಕ್ಕಾಗಿ ಸುಪ್ರೀಂಕೋರ್ಟಿನವರೆಗೆ ಹೋಗಬೇಕು. ಇವತ್ತು ಇಲ್ಲಿ " Any Proceedings of the Authority or any Officers subordinate to the Authority". for what purpose?

"for the purpose of satisfying himself as to the legality or propriety of any order or proceedings and may pass such order with respect thereto he thinks fit" ಯಾವುದರ ಲೀಗಲಿಟಿ?

Is he questioning the legality of the Supreme Court judgement? Is he questioning the legality of the various Civil Courts? ಯಾವುದರ ಪ್ರೊಸೀಡಿಂಗ್ಸ್? ಯಾವ ಪ್ರೋಸೀಡಿಂಗ್ಸ್ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಕೆಳಗಡೆ ಇದೆ? ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯ ಲೀಗಲ್ ಆಫೀಸರ್ ಹೇಳುತ್ತಾನೆ. ಇದನ್ನು ಕೊಡುವುದಕ್ಕೆ ಬರುವುದಿಲ್ಲ. ರೀ ಕನ್‌ವೇ ಮಾಡಲಿಕ್ಕೆ ಬರುವುದಿಲ್ಲ. ವಿತ್‌ಡ್ರಾ ಮಾಡುವುದಕ್ಕೆ ಸಾಧ್ಯವೇ ಇಲ್ಲ. ರೀ ಕನ್‌ವೇ ಮಾಡತಕ್ಕದ್ದು ಬೇರೆ. ವಿತ್‌ಡ್ರಾ ಮಾಡತಕ್ಕದ್ದು ಬೇರೆ.

ವಿತ್‌ಡ್ರಾ ಎಲ್ಲಿ ಬರುತ್ತದೆ? ಯಾವ ಆಸ್ತಿಯ ಸ್ವಾಧೀನವನ್ನು ಭೂಸ್ವಾಧೀನಾಧಿಕಾರಿ ಎಲ್ಲಿ ತಕ್ಕೊಂಡಿರುವುದಿಲ್ಲ ಅದೂ ಕೂಡ ಇದು ಬೇಕಾಗಿಲ್ಲ ಎಂದು ಮನಸ್ಸಿಗೆ ಬಂದರೆ ಬರುತ್ತದೆ. ಈ ಅಧಿಕಾರ, ಯಾರಿಗೆ? ಸರ್ಕಾರಕ್ಕೆ ಬರುತ್ತದೆ. ಇಂದು

ಸ್ಕೀಮನ್ನು ಸರ್ಕಾರ ಅಪ್ರೂ ಮಾಡಿದೆ, 4 ನೋಟಿಫಿಕೇಶನ್ 6 ನೋಟಿಫಿಕೇಶನ್ ಆದ ಮೇಲೆ ಅಕ್ವಿಜಿಷನ್ ಸರ್ಕಾರಕ್ಕೆ ಸ್ಕೀಮ್ ಹೋಗಿದೆ, 76ನೇ ಇಸವಿಯಲ್ಲಿ ಸ್ಕೀಮನ್ನು ಅಪ್ರೂ ಮಾಡಿದ್ದಾರೆ, 78ನೇ ಇಸವಿಯಲ್ಲಿ ಸ್ವಯಂಪ್ರೇರಿತರಾಗಿ ಅವರು ಸ್ವಾಧೀನ ಕೊಟ್ಟಿದ್ದಾರೆ ತದನಂತರ ಬೇರೆ ಅಕ್ವಿಜಿಷನ್ ಪ್ರೊಸಿಡಿಂಗ್ಸ್‌ನ್ನೇ ಪ್ರಶ್ನೆ ಮಾಡಿದ್ದಾರೆ. ಸುಪ್ರೀಂಕೋರ್ಟ್ ತನ್ನ ಆದೇಶವನ್ನು ಕೊಡುತ್ತದೆ, ಇದು ಸರಿಯಾಗಿದೆ, ಇದನ್ನು ಮಾಡಬಹುದು ಎಂದು. ಇವರು ಸೆಕ್ಷನ್ 63 ಆಫ್ ಬಿಡಿಎ ಆಕ್ಟ್ ಪ್ರಕಾರ ಅರ್ಜಿ ತಕ್ಕೊಂಡು ಇದನ್ನು ರಿವಿಜನ್ ಪಿಟಿಶನ್ ಎಂದು ಹೇಳಿ ಒಂದು ಜಡ್ಜ್‌ಮೆಂಟನ್ನು 27-12-90ರಲ್ಲಿ ಬರೆಯುತ್ತಾರೆ. ಏನು ಕಾರಣ ಕೊಟ್ಟಿರುವುದಕ್ಕೆ? ಸ್ವಾಧೀನ ಇಲ್ಲ, ಸ್ವಾಧೀನ ಅವರ ಹತ್ತಿರ ಇತ್ತು, ಸ್ವಾಧೀನ ಅವರ ಹತ್ತಿರ ಇದೆ ಅಂತ ಏನು ಹೇಳಿಲ್ಲ ಹೈಕೋರ್ಟಿನಲ್ಲಾದ ತೀರ್ಮಾನ ನನ್ನ ಹತ್ತಿರ ಇದೆ, ಅದರಲ್ಲಿ ಹೇಳ್ತಾರೆ ಅಕ್ವಿಜಿಶನ್ ಬದಲಾವಣೆ ಮಾಡಲು ಆಗುವುದಿಲ್ಲ ಅಕ್ವಿಜಿಶನ್ ಸರಿಯಾಗಿದೆ ಎಂದು ಕೊನೆಯಲ್ಲಿ ಪ್ರಸ್ತಾಪ ಮಾಡುತ್ತಾ ಹೈಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಈ ರೀತಿ ಹೇಳಿದ್ದಾರೆ :

"This being the legal position, I have no doubt in holding that on voluntary handing over the possession on 19th May 1978, ಭೂಮಾಲೀಕರು 78ರ ಮೇ ತಿಂಗಳಲ್ಲೇ ಅದರ ಸ್ವಾಧೀನ ಕೊಡ್ತಾರೆ. the BDA was in lawful posession of the same area so surrendered." Indeed it is a step in the execution of the scheme.

ಈ ಸ್ಕೀಮು ಸರಿಯಾಗಿಲ್ಲ, ಹಿಂದೆ ಕೈಗಾರಿಕ ಉದ್ದೇಶಕ್ಕೆಂದು 63ರಲ್ಲಿ ಬಂದಿತ್ತು ಅದಕ್ಕಾಗಿ ತದನಂತರ ಬಿಡಿಎ ಲೇಔಟ್ ಮಾಡಿತ್ತು ಸಿಪಿಡಿ ಸ್ಕೀಮ್ ಎಂದು ಪ್ರಸ್ತಾಪಿಸಿ ಅದಕ್ಕೂ ಇದಕ್ಕೂ ಸರಿಯಾಗಿಲ್ಲ ಎಂದು ಪ್ರಶ್ನೆ ಮಾಡಿದ್ದಾರೆ, ಈ ರಿಟ್ ಪಿಟಿಷನ್ ನಂ. 7239 ಆಫ್ 1983 ಇಷ್ಟೆಲ್ಲ ಹೇಳಿದ ಮೇಲೂ ಈ ಜಡ್ಜ್‌ಮೆಂಟ್ ಮೇಲೆ ಮತ್ತೆ ಅಪೀಲ್ ಹಾಕಿದ್ದಾರೆ.

ಅದರ ಮೇಲೂ ಕೂಡ ಸಿಂಧುವಾಗಿಲ್ಲ, ಅದರ ಮೇಲೆ ಸುಪ್ರೀಂಕೋರ್ಟಿಗೆ ಹೋಗಿದ್ದಾರೆ ಅಲ್ಲೂ ಸಿಂಧುವಾಗಿಲ್ಲ. ಬೇರೆ ಬೇರೆ ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಹಾಕಿದ್ದಾರೆ ಅಲ್ಲೂ ಸಿಂಧುವಾಗಿಲ್ಲ, ಇಷ್ಟೆಲ್ಲಾ ಆದ ಮೇಲೆ ಇವರು ಅರ್ಜಿ ತಕ್ಕೊಂಡು ರಿವಿಜನ್ ಪಿಟಿಶನ್‌ನಲ್ಲಿ ಏನು ಹೇಳ್ತಾರೆ? ಒಂದೊಂದು ಸಲ ನಾವು ಮಾತನಾಡುವಾಗ ಹೇಳ್ತೀವೆ. ಏನೆಂದರೆ ಏನಯ್ಯಾ ಮೊಗಲಾಯಿ ದರ್ಬಾರ್ ಆಗಿಹೋಯ್ತಾ ಅಂತ ಅಲ್ಲೂ ಕೂಡ ಇಂಥಾದ್ದು ನಡೆದಿತ್ತೋ ಇಲ್ಲವೊ ಗೊತ್ತಿಲ್ಲ, ಇಲ್ಲಿ ಒಂದೇ ಕಾರಣ ಸ್ವಾಧೀನ ಅವರಲ್ಲಿತ್ತು ಎಂದು ಹೇಳುವುದಕ್ಕೆ; "Inview of the above forgoing reasons and considering the totality of the circumstances, the balance of convenience lies in favour of the petitioners "..." ಅರ್ಜಿದಾರರು ಅಂದರೆ ಹಳೆಯ ಮಾಲೀಕರು. " xx xx and hence the petitions filed by the petitioners are allowed with the relief sought for by them as enumerated in para 10 of the above."

ಎಂದು ಹೇಳಿ ತದನಂತರ ಒಂದು ಡೈರೆಕ್ಷನ್ ಅನ್ನು 21-8-91ರಂದು ಕೊಡ್ತಾರೆ ಈ ಆರ್ಡರನ್ನು ನೀವು ಜಾರಿ ಮಾಡಬೇಕು ಅವರಿಗೆ ಎಂದು ಮುಖ್ಯಮಂತ್ರಿಗಳು ಇಲ್ಲಿ ಹೇಳಿಕೆ ಕೊಟ್ಟರಲ್ಲ, ಅದಕ್ಕಿಂತ ಸ್ವಲ್ಪ ಮುಂಚೆ ;

" With reference to the above, I am directed to invite your attention to the decision taken in para-10" ನಾನು ಆಗಲೇ ಪ್ರಸ್ತಾಪಿಸಿದ್ದು :

" Government order copy enclosed communicated to the BDA along with the Govt. letter of even number dated 5.2.91 and request you to kindlt furnish that notification."

ಈ ನೋಟಿಫಿಕೇಷನ್ ಆಗಿಲ್ಲ, ಇದನ್ನು ಮಾಡಬೇಕು ಅಂತ ಆದೇಶ ಕೊಟ್ಟರು ಆದರೆ ಈ ಜಜ್ಜಮೆಂಟ್ ಏನಿದೆ ಇಂದು ಯಾವ ಪರಿಸ್ಥಿತಿಗೆ ಬಂದಿದ್ದಾರೆ ಯಾರಿಗೆ ಮನೆ ಕಟ್ಟಲು ಜಾಗ ವಿತರಣೆಯಾಗಿತ್ತು, ಅವರು ಮತ್ತೊಂದು ಸಾರಿ ಕೋರ್ಟಿಗೆ ಹೋಗುವ ಪರಿಸ್ಥಿತಿ ತಂದಿಟ್ಟಿದ್ದಾರೆ ಈ ಅಧಿಕಾರಿ ಇದು ಸರಿಯೋ . ತಪ್ಪೋ ಆ ಮಾತು ಬೇರೆ, ಇದು ಸರ್ಕಾರದ ಆರ್ಡರ್ ಆಗುತ್ತದೆ, ಬಿಡಿಎಗೆ ನೋಟಿಫೈ ಮಾಡಬೇಕು ಅಂತ ಡೈರೆಕ್ಷನ್ ಕೊಟ್ಟಿದ್ದಾರೆ, ಇವತ್ತು ಮಾಡದೇ ಇರಬಹುದು ನಾಳೆ ಮಾಡುತ್ತಾರೆ ಅಥವಾ ಮುಖ್ಯಮಂತ್ರಿಗಳು ನಿಲ್ಲಿಸಬಹುದು, ಆದರೆ ಇಂಥ ಒಂದು ಕೆಟ್ಟ ಆರ್ಡರನ್ನು ಬರೆದು ಇದನ್ನು ನೋಟಿಫೈ ಮಾಡಬೇಕೆಂದು ಹೇಳಿ "and request you to kindly furnish that notification for denotifying the land as decided in the above Govt letter immediately. In the meantime, the BDA is requested to implement the Govt. Order".

ಏನಿಷ್ಟು ಬಹಳ ಉತ್ಸಾಹ, ಏತಕ್ಕಾಗಿ? ಇದರ ಹಿಂದೆ ಇರುವ ಆಸಕ್ತಿ ಏನು ?

"G.O. dated 27.12.90 which has been sent to BDA vide Govt. letter referred to above."

ಏತಕ್ಕಾಗಿ ಸರ್ಕಾರದ ಈ ಕಾರ್ಯದರ್ಶಿ ಇಂಥ ಆದೇಶ ಕೊಡುವುದು? ಇದರ ಹಿಂದೆ ಟ್ರಿಬ್ಯೂನಲ್‌ನವರು ಕೂಡ ಕೊಟ್ಟಿದ್ದಾರೆ ಕಾರಣಾಂತರದಿಂದ ಬಿಡಿಎನವರು ಸ್ವಲ್ಪಮಟ್ಟಿಗೆ ಹಿಂದೆ ಮುಂದೆ ನೋಡಿದ್ದಾರೆ ಡೀನೋಟಿಫೈ ಮಾಡುವ ಸಲುವಾಗಿ, ಅಕ್ವಿಜಿಶನ್ ಏನಾಗಿತ್ತು ಅದನ್ನು ವಿಥ್‌ಡ್ರಾಯಲ್ ಆಗಿರುವುದರಿಂದ ಡಿನೋಟಿಫಿಕೇಶನ್ ಮಾಡಬೇಕಾಗುತ್ತದೆ. ಇದು 27-12-90 ರಲ್ಲಿ ಈ ಒಂದು ತೀರ್ಮಾನ ತಕ್ಕೊಂಡಿರುವುದು, ವೀರೇಂದ್ರಪಾಟೀಲರ ಸರ್ಕಾರದಲ್ಲಿ ಅವರಿಗೆ ರಿಜೆಕ್ಟ್ ಮಾಡಿರುವ ತೀರ್ಮಾನ 21-8-1991 ರಲ್ಲಿ ಆಗುತ್ತದೆ. 27-12-90ರಲ್ಲಿ ಈ ಜಡ್ಜ್‌ಮೆಂಟ್ ಆಗುತ್ತದೆ, ಈ ಅಧಿಕಾರಿ ಎಷ್ಟು ಉತ್ಸಾಹ ತಕ್ಕೊಂಡಿದ್ದಾರೆ ಎಂಬುದನ್ನು ತಾವು ನೋಡಿ ಊಹೆ ಮಾಡಬಹುದು. ಏಕಿಷ್ಟು ಆಸಕ್ತಿ, ಯಾವ ಕಾರಣದಿಂದ, ಇವರಲ್ಲಿ ಏನಿರಬಹುದು? ಅಥವಾ ಸರ್ಕಾರ ಏನಾದರೂ ಆದೇಶ ಕೊಟ್ಟಿದೆಯೇ ಹೀಗೆ ಮಾಡಬಹುದು ಎಂದು ಹೀಗೆ ಹಲವಾರು ಪ್ರಶ್ನೆಗಳು ಇದರಿಂದ ಉದ್ಭವವಾಗುತ್ತದೆ. ಉಪಾಧ್ಯಕ್ಷರೇ, 5-2-91ರಲ್ಲಿ ಬರೆದ ಕಾಗದದಲ್ಲಿ ಹೀಗೆ ಹೇಳ್ತಾರೆ....

"Immediate implementation of the BDA. A copy of the order is enclosed herewith. I am directed to request you to implement the order urgently and send compliance." ಅತಿ ಉತ್ಸಾಹ ಏತಕ್ಕಾಗಿ, ಏನಿದರಲ್ಲಿ? ಸೆಕ್ಷನ್ 63 ಪ್ರಕಾರ ಏನಿದೆ ನಿಮಗೆ ಅಧಿಕಾರ?

Do you have so much of power to nullify the judgement of the supreme court?

ಇದನ್ನು ವಿಥ್‌ಡ್ರಾ ಮಾಡುವ ಅಧಿಕಾರ ಲ್ಯಾಂಡ್ ಅಕ್ವಿಜಿಶನ್ ಆಕ್ಟ್ ಪ್ರಕಾರ ಸರ್ಕಾರಕ್ಕಿದೆ. ಇಲ್ಲ ಅಂತ ನಾನು ಹೇಳುವುದಿಲ್ಲ. ಯಾವಾಗ ಎಂದರೆ ಸರ್ಕಾರಕ್ಕೆ ಈ ಸ್ಕೀಮು ಮತ್ತೊಂದು ಸರಿಯಾಗಿಲ್ಲ ಎಂದು ತಿಳಿದು ಬಂದ ಮೇಲೆ, ನೀವು ಯಾವುದನ್ನು ಸರಿಮಾಡೋಕೆ ಹೊರಟಿದ್ದೀರಿ ನೀವು ಯಾರು?

Section 48 completion of acquisition not compulsory, but compensation to be awarded when not completed... ಪರಿಹಾರ ಇಲ್ಲಿ ಕೊಟ್ಟು ಆಗಿದೆ.

"Execpt in cases provided for in section (36) the Government shall be at liberty to withdraw from the acquisition of any land of which possession has not been taken."

ಇದು ಒಂದು ಅವಕಾಶ ಇದೆ. ಇವತ್ತು ಇದು ನಮಗೆ ಬೇಕಾಗಿಲ್ಲ ಎಂದು ಬಿ.ಡಿ.ಎ ಹೇಳಿಲ್ಲ. ಸರ್ಕಾರ 76ನೇ ಇಸವಿಯಲ್ಲಿ ಸ್ಕೀಮ್‌ಗೆ ಏನು ಒಪ್ಪಿಗೆ ಮಾಡಿದೆ ಅದನ್ನು ಅವರು ಹೇಳಿಲ್ಲ. ಮೊನ್ನೆ ಮೊನ್ನೆ ಮಾಜಿ ಮುಖ್ಯಮಂತ್ರಿಗಳಾದ ವೀರೇಂದ್ರಪಾಟೀಲರು ಏನು ರಿಜೆಕ್ಟ್ ಮಾಡಿದ್ದರು, ಅಗಲೂ ಹೇಳಿಲ್ಲ. ನೀವು ಯಾರು? where do you have the power again? When once the Government has rejected that request? Where do you get the powers again to review that judgement? Rejection is also a judgement and order of the Government. ನಿಮಗೆ ಮತ್ತೆ ಎಲ್ಲಿ ಅಧಿಕಾರ ಬರುತ್ತದೆ? ಯಾವ ಸೆಕ್ಷನ್ ಪ್ರಕಾರ ಅಧಿಕಾರ ಬರುತ್ತದೆ? ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ಅಧಿಕಾರ ಬರುತ್ತದೆಯೇ? ಬಿ.ಡಿ.ಎ. ಆಕ್ಟ್ ಪ್ರಕಾರ ಅಧಿಕಾರ ಬರುತ್ತದೆಯೇ? ಅಥವಾ ನಿಮಗೇನಾದರೂ ಇನ್‌ಹರೆಂಟ್ ಪವರ್ಸ್ ಇದೆಯೇ? ಎಲ್ಲಿಂದ ಬರುತ್ತದೆ? 77ನೇ ಇಸವಿಯಲ್ಲಿ ಪ್ರಾರಂಭವಾಗಿ 91 ರವರೆಗೆ ಅವರು ಹೆಣಗಾಡಿ ಏನಾಗಿರಬಹುದು? ಇವತ್ತು ಇದು ಇರಬಹುದು, ಯಾರಿಗೋ ಬೇಕಾಗಿರುವವರು ಹೇಳಿದ್ದಾರೆ, ಏನೋ ಒಂದು ಇಂಡಸ್ಟ್ರಿ ಇದೆ ಎಂದು. 600 ಜನ ಇದ್ದಾರೆ ಎಂದು, 600 ಜನರು ಇಲ್ಲ, ಎಂಥದ್ದು ಇಲ್ಲ. 25 ಜನರೋ ಏನೊ ಅಲ್ಲಿ ಷೆಡ್ಡನ್ನು ಕಾದುಕೊಂಡು ಕುಳಿತಿದ್ದಾರೆ. ಈ ರೀತಿ ದುರುಪಯೋಗ ಮಾಡುವುದಾದರೆ ಇಂಥ ಅಧಿಕಾರಿಗಳನ್ನು ನಮ್ಮ ರಾಜ್ಯದಲ್ಲಿ ಇಟ್ಟುಕೊಳ್ಳಬಾರದು. ಅವರು ನಿರುಪಯೋಗಿ ಅಧಿಕಾರಿ ಎಂದು ಹೇಳುವುದಕ್ಕೆ ಇದಕ್ಕಿಂತ ಹೆಚ್ಚು ಕಾರಣ ಬೇಕಾಗಿಲ್ಲ. ಅವರಿಗೆ ತಕ್ಷಣ ಶಿಕ್ಷೆ ಕೊಡುವುದಕ್ಕೆ, ರಾಜ್ಯದಿಂದ ಹೊರಗಡೆ ಕಳುಹಿಸುವುದಕ್ಕೆ, ಬೇಕಾದರೆ ಸೆಂಟ್ರಲ್ ಗೌರ್ನಮೆಂಟ್‌ಗೆ ಎಲ್ಲಿಯೋ ಹೋಗಿ ಕೆಲಸವನ್ನು ಮಾಡಲಿ. This is a blanket misuse of power and abuse of powers.

ನಾವು ಏತಕ್ಕೋಸ್ಕರ? ಯಾರಿಗೋಸ್ಕರ? ಕೋರ್ಟ್‌ಗಳು ಏತಕ್ಕೆ ಇರಬೇಕು ಹಾಗದರೆ. ಸುಪ್ರೀಂಕೋರ್ಟ್, ಹೈಕೋರ್ಟು ಏತಕ್ಕೆ ಇರಬೇಕು? ಸರ್ಕಾರ ಏತಕ್ಕೆ ಇರಬೇಕು ಇವತ್ತು ಸರ್ಕಾರ ಬೇಡ ಎಂದು ಹೇಳಿದೆಯೋ? ನಿಮಗೆ ಏನಾದರೂ ಆದೇಶವನ್ನು ಕೊಟ್ಟಿದೆಯೇ? ಇವತ್ತು of any land which is in posession has not been taken, ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಸರಿಯಾಗಿದೆ ಎಂದು

ಹೇಳಿದ್ದಾರೆ. ಪೊಸೆಷನ್ ಬಗ್ಗೆ ಹೈಕೋರ್ಟ್‌ನಲ್ಲಿ ಏನು ಜಡ್ಜ್‌ಮೆಂಟ್ ಬಂದಿತ್ತು, ಆ ಜಡ್ಜ್‌ಮೆಂಟ್ ಮೇಲೆ ಏನು ಅಪೀಲು ಹೋಗಿದ್ದರು, ಆ ಜಡ್ಜ್‌ಮೆಂಟ್‌ನಲ್ಲಿ ಕೂಡಾ ಪ್ರಸ್ತಾಪ ಮಾಡಿದ್ದಾರೆ, ಹೇಳಿದ್ದಾರೆ. ಇದೇ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ವಾಲೆಂಟರಿ ಸರೆಂಡರ್ ಎಂಬ ಮಾತನ್ನು ಪ್ರಸ್ತಾಪ ಮಾಡಿ ಹೇಳಿದ್ದಾರೆ, ಒಂದೊಂದು ಸಾರಿ ಅಧ್ಯಕ್ಷರೇ, ತಮಗೆ ಗೊತ್ತಿದೆ, ಎಲ್ಲಾ ತೀರ್ಮಾನವಾದರೂ ಕೂಡ ಅದನ್ನು ಮನೆಗೆ ತೆಗೆದುಕೊಂಡು ಹೋಗುವುದಿಲ್ಲ. ಅದು ಅಲ್ಲಿಯೇ ಬಿದ್ದಿರುತ್ತದೆ. ಒಂದು ಸ್ಟ್ರಕ್ಚರ್ ಬಗ್ಗೆ ಎಂದು ತಿಳಿದುಕೊಳ್ಳೋಣ. ಅದು ಆಗುತ್ತದೆ. ಎಷ್ಟೋ ಸಾರಿ ಆ ರೀತಿ ಆಗುತ್ತದೆ. ಅದನ್ನು ಕಿತ್ತುಕೊಂಡು ಹೋಗುವುದಿಲ್ಲ, ಎಲ್ಲಾ ಆದಮೇಲೆಯೂ ಕಿತ್ತುಕೊಂಡು ಹೋಗುವುದಿಲ್ಲ, ಹಾಗೆಯೇ ಬಿದ್ದಿರುತ್ತದೆ. ಹಾಗೆಯೇ ಬಿಟ್ಟಿದ್ದಾರೆ ಎಂದು ಹೇಳಿ ಅವನು ಸ್ವಾಧೀನದಲ್ಲಿ ಇದ್ದಾನೆ ಎಂದು ನಾವು ಹೇಳುವುದಕ್ಕಾಗುತ್ತದೆಯೇ? ಅವನಿಗೆ ಒಂದು ನೋಟೀಸನ್ನು ಕೊಡುತ್ತಾರೆ. ಇದನ್ನು ತೆಗೆದುಕೊಂಡು ಹೋಗಪ್ಪ, ಇಲ್ಲದಿದ್ದರೆ ನಾವು ತೆಗೆಯಬೇಕಾಗುತ್ತದೆ ಎಂದು ಹೇಳಿ ನೋಟೀಸನ್ನು ಕೊಡುತ್ತೇವೆ. ವೆಕೇಟ್ ಮಾಡು ಎಂದು ಹೇಳಿ ನೋಟೀಸ್ ಕೊಡುತ್ತೇವೆ. ಅವನು ಒಂದು ವೇಳೆ ನೋಟೀಸನ್ನು ತೆಗೆದುಕೊಂಡು ಹೋಗಿ ಸಿವಿಲ್ ಜಡ್ಜ್ ಕೋರ್ಟಿಗೋ ಮತ್ತೊಂದು ಕೋರ್ಟಿಗೋ ಅಪೀಲು ಹೋಗ ತಕ್ಕಂಥದ್ದು ಉಂಟು ಇನ್‌ಜಂಕ್ಷನ್ ತೆಗೆದುಕೊಳ್ಳತಕ್ಕಂಥದ್ದು ಉಂಟು. ಇಂಥದ್ದನ್ನು ಮಾಡಿದ್ದಾರೆ. ಕೋರ್ಟ್‌ನವರು ಹೇಳಿದ್ದಾರೆ. they are trespassers, they are not in possession ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇನ್ನು ಎಷ್ಟು ಕೋರ್ಟ್‌ಗಳಿಗೆ ಜನರನ್ನು ಓಡಾಡಿಸಬೇಕು ಎಂದು ಮಾಡಿದ್ದೀರಿ? ಏತಕ್ಕೋಸ್ಕರ ಮಾಡಿದ್ದೀರಿ? ಬಹಳ ಮಟ್ಟಿಗೆ ನನಗೆ ಅನಿಸುತ್ತಿದೆ, ಈ ವಿಚಾರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿರಲಾರದು ಎಂದು. ತಾವು ತರಿಸಬೇಕು, ನೋಡಿಸಬೇಕು ಇದನ್ನು. ಅಡ್ವೋಕೇಟ್ ಜನರಲ್‌ರವರು ಒಪೀನಿಯನನ್ನು ಕೊಟ್ಟಿದ್ದಾರೆ ಇದರಲ್ಲಿ, ಸರ್ಕಾರ ನಮಗೆ ಇದು ಬೇಡ ಎಂದು ಹೇಳಿದೆಯೇ ಬೇಡ ಎಂದು ಹೇಳುವುದಾದರೆ 29 ಲಕ್ಷ ರೂಪಾಯಿಗಳ ಕಾಂಪೆನ್‌ಸೇಷನ್ 78 ರ ಸುಮಾರಿನಲ್ಲಿ ನೀವು ಅದಕ್ಕೆ ಕೊಟ್ಟು ಇಲ್ಲಿಯವರೆಗೆ ಏತಕ್ಕೆ ಇದು ಬಡ್ಡಿ ಸಮೇತ ಬಿ.ಡಿ.ಎ. ನಲ್ಲಿ ಬಿದ್ದಿರಬೇಕಾಗಿತ್ತು. BDA is also a party to all the courts. ಹಾಗದರೆ ನೀವು ಹಣವನ್ನು ಏತಕ್ಕೆ ಖರ್ಚು ಮಾಡಿಸಿದ್ದೀರಿ? ಈಗ ಆ ಬಿ.ಡಿ.ಎ. ಇವರಿಗೆ ತೊಂದರೆಯನ್ನು ಕೊಡುತ್ತಿದೆಯಲ್ಲಾ ಅವರಿಗೆ ಏನು ಶಿಕ್ಷೆಯನ್ನು ಕೊಡುತ್ತೀರಿ? ಹತ್ತಾರು ವಿಚಾರಗಳು ಇದರಲ್ಲಿ ಇದೆ. ಆದುದರಿಂದ ಸ್ವಾಮಿ, (ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು) ನಾನು ಈ ಒಂದು ವಿಷಯವನ್ನು ಏನು ಪ್ರಸ್ತಾಪ ಮಾಡಿದ್ದೇನೆ, ಇದಕ್ಕಿಂತ ಅಧಿಕಾರವನ್ನು ದುರುಪಯೋಗ ಮಾಡಿರತಕ್ಕಂಥ ನಿದರ್ಶನ ನಮ್ಮ ರಾಜ್ಯದಲ್ಲಿ ಎಂದೂ ನಡೆಯುವುದಿಲ್ಲವೋ ಏನೋ? ಇದನ್ನು ನಾವು ಬಹಳ ತೀಕ್ಷ್ಣವಾಗಿ ತೀವ್ರವಾಗಿ ವಿಚಾರ ಮಾಡಬೇಕಾಗುತ್ತದೆ. ಅಧ್ಯಕ್ಷರೇ ತಾವಾದರೂ ಕೂಡ ಈ ಸದನದ ನಾಲ್ಕೈದು ಜನ ಸದಸ್ಯರನ್ನೇನಾದರೂ ಸೇರಿಸಿ ಒಂದು ಸಮಿತಿ ಮಾಡಿ ಎಲ್ಲಾ ನೋಡುವ ಹಾಗಿದ್ದರೆ ನೋಡಿಸಿ ಅಥವಾ ಇದನ್ನು ನೋಡಬೇಕಾದದ್ದು ಇಲ್ಲ, ಇದನ್ನು ತಿರಸ್ಕಾರ ಮಾಡಬೇಕು, ಆದರೆ ಇದು ಸರಿಯೋ ತಪ್ಪೋ ಎಂದು ಒಂದುಕೆಟ್ಟ ಆರ್ಡರ್ ಬಂದಮೇಲೆ ಇದನ್ನು ಕೋರ್ಟ್‌ನವರೇ ಹೊಡೆದು ಹಾಕಬೇಕಾಗುತ್ತದೆಯೇ ವಿನಹ ಬೇರೆಯವರು ಇದನ್ನು ಹೊಡೆದು ಹಾಕುವುದಕ್ಕೆ ಸಾಧ್ಯವಿಲ್ಲ, ಇಂಥ

ಪರಿಸ್ಥಿತಿಗೆ ತಂದು ಇಟ್ಟಿದ್ದಾರೆ. ವಿಧಿ ಇಲ್ಲದೆ ಮತ್ತೆ ಅವರು ಇವತ್ತು ಕೋರ್ಟ್‌ಗೆ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಹಿಂದೆ ಮಾಡಿದ್ದಾರೆ ಎಂದು ಮೊದಲಿನಿಂದಲೂ ವಾದ ಮಾಡಿದ್ದೀರಿ. ಯಾವ ಶಾಸನದ ಅಡಿಯಲ್ಲಿಯೂ ಅಧಿಕಾರವಿಲ್ಲದೆ, ಈ ಆಜ್ಞೆ ಬಂದಿದೆ ಎಂದು ಹೇಳಿ ಮೊದಲಿನಿಂದ ತಾವು ವಾದ ಮಾಡಿಕೊಂಡು ಬಂದಿದ್ದೀರಿ. ಈ ಆಜ್ಞೆಯನ್ನು ಬರೆಯುವುದಕ್ಕೆ ಯಾವ ಅಧಿಕಾರವೂ ಇಲ್ಲ ಎನ್ನತಕ್ಕಂಥದ್ದು ಮೊದಲಿನಿಂದಲೂ ತಮ್ಮ ವಾದ.

6.00 ಪಿ.ಎಂ

ದಿನಾಂಕ 27-12-90ಕ್ಕೆ ಬಂದ ಆಜ್ಞೆಯನ್ನು ಬರೆಯುವುದಕ್ಕೆ ಯಾವ ಶಾಸನಗಳ ಅಡಿಯಲ್ಲಿಯೂ ಅಧಿಕಾರಿಗೆ ಅವಕಾಶ ಇಲ್ಲ, ಅಧಿಕಾರ ಇಲ್ಲ ಎಂದು ಹೇಳಿದ್ದೀರಿ.......

ಶ್ರೀ ಹೆಚ್. ಏಕಾಂತಯ್ಯ : ಸರ್ಕಾರೀ ಆದೇಶ ಆಗಿ ಹೋಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈಗ ಈ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಹೇಳುತ್ತೀರಿ, ದುರುಪಯೋಗ ಹೇಗೆ ಆಗುತ್ತದೆ? ಅಧಿಕಾರವೇ ಇಲ್ಲ ಎಂದು ತಮ್ಮ ವಾದ ಆಗಿದೆ.

ಶ್ರೀ ಕೆ.ಹೆಚ್. ರಂಗನಾಥ್ : ಈ ಕೆಟ್ಟ ಆರ್ಡರನ್ನು ಬರೆಯುವುದಕ್ಕೆ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳಬೇಕೇ? ಕಮೀಷನ್ನರ್, ಸೆಕ್ರೆಟರಿ ಅನ್ನುವ ಇಂತಹ ಅಧಿಕಾರವನ್ನು ಕೆಟ್ಟ ಆರ್ಡರ್ ಬರೆಯುವುದಕ್ಕೆ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ನಾನು ಹೇಳಿದೆ. It is not under proper law. ಎಂದು ನಾನು ಹೇಳಲಿಲ್ಲ. ಕೆಟ್ಟ ಆರ್ಡರನ್ನು ಬರೆದು ಅವರಿಗೆ ತೊಂದರೆಯನ್ನು ಕೊಡುವುದಕ್ಕೋಸ್ಕರ Section 63 of the B.D.A. Act ಅನ್ನು ಉಪಯೋಗಿಸಿಕೊಂಡು ಒಂದು ಅರ್ಜಿಯನ್ನು ತೆಗೆದುಕೊಂಡು ಮಾಡಿದ್ದಾರೆಂದು ಹೇಳಿದ್ದೇನೆ. Legality and the propriety. ಏನು *ಲೀಗಲಿಟಿ* ಪ್ರೋಸಿಡಿಂಗ್ಸ್ ಯಾವ ಪ್ರೊಸೀಡಿಂಗ್ಸ್ They were not the proceedings under the B.D.A. authority or subordinate to the authority. They were proceedings before all the three courts High court, High court appeal, Supreme court, and various civil courts also. ಅವರು ಮಾಡಿದಮೇಲೆ ಒಂದು ಅರ್ಜಿಯನ್ನು ವೀರೇಂದ್ರಪಾಟೀಲರು ತಿರಸ್ಕಾರ ಮಾಡಿ, ಒಂದು ತಿಂಗಳೊಳಗಾಗಿ ಅಥವಾ ಒಂದು ತಿಂಗಳ ಎಂಟು ದಿವಸದಲ್ಲಿ ಏನೋ ಒಂದು ಅರ್ಜಿಯನ್ನು ತೆಗೆದುಕೊಂಡು 63ರಲ್ಲಿ ರಿವಿಜನ್ ಪಿಟಿಷನ್ ಎಂದು ಕರೆದು, ಅದರಲ್ಲಿ ಸ್ವಾಧೀನ ಇಲ್ಲ, ಇವರ ಸ್ವಾಧೀನದಲ್ಲಿದೆಎಂದು ಹೇಳಿ ಒಂದು ಆರ್ಡರನ್ನು ಬರೆದಿದ್ದಾರೆ. ಇದು ಸ್ವಾಧೀನದಲ್ಲಿದೆ, ಅದಕ್ಕರ ವಿತ್‌ಡ್ರಾ ಮಾಡಿ ಎಂದು, ಸ್ವಾಧೀನ ಇದೆ ಎಂದು ಅಭಿಪ್ರಾಯಕ್ಕೆ ಬಂದರೂ ಕೂಡ ವಿತ್‌ಡ್ರಾ ಮಾಡಬೇಕು ಅನ್ನತಕ್ಕದ್ದು ಕೂಡ ಜ್ಯುಡಿಷಿಯಲ್ ಡಿಸಿಷನ್ ಆಗಬೇಕು. ಏತಕ್ಕೋಸ್ಕರ ವಿತ್‌ಡ್ರಾ ಮಾಡಬೇಕು, ಯಾರಿಗೋಸ್ಕರ ವಿತ್‌ಡ್ರಾ ಮಾಡಬೇಕು.

ಶ್ರೀ ಹೆಚ್. ಏಕಾಂತಯ್ಯ : ಬಿ.ಡಿ.ಎ. ಆಕ್ಟ್ 63ನೇ ವಿಧಿ ಏನಿದೆ, ಆ ವಿಧಿಯನ್ನು ದುರುಪಯೋಗ ಪಡಿಸಿಕೊಂಡಿರುವುದು ಮೊದಲನೆಯ ಸಲ ಅಲ್ಲ, ತಾವು ಏನು ಈಗ ಪ್ರಸ್ತಾಪ ಮಾಡುತ್ತಿದ್ದೀರಿ. It is not a solitary

instance ? In so many other cases, they have misused the provisions of Sec.63 of the BDA act. ವ್ಯವಸ್ಥಿತವಾಗಿ ಇದು ನಡೆಯುತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್ : ಈಗ ಇದು ನನ್ನ ಗಮನಕ್ಕೆ ಬಂತು, ಅದಕ್ಕೆ ನಾನು ತಿಳಿಸಿದೆ.

ಶ್ರೀ ಹೆಚ್. ಏಕಾಂತಯ್ಯ : ಈ ಸದನದಲ್ಲಿ ನಾನು ಅದನ್ನು ಪ್ರಸ್ತಾಪ ಮಾಡಿದ್ದೇನೆ. ಈ ಸದನದಲ್ಲಿ ಬಿಡಿಎ ಕಾನೂನಿನ 63ನೇ ವಿಧಿಯನ್ನು ದುರುಪಯೋಗ ಪಡಿಸಿಕೊಂಡು ತಮ್ಮ ಇಷ್ಟಬಂದಂತಹ ರೀತಿಯಲ್ಲಿ ಆ ಆದೇಶಗಳನ್ನು ಹೊರಡಿಸಿದ್ದಾರೆಂಬ ಆರೋಪವನ್ನು ಮಾಡಿದ್ದೇವೆ. ಅದಕ್ಕೆ ನಮ್ಮ ದುರಾದೃಷ್ಟ ಏನೆಂದರೆ ನೇರವಾದ ಉತ್ತರ ಸರ್ಕಾರದಿಂದ ಇಲ್ಲಿಯವರೆಗೆ ಬಾರದೆ ಇರುವುದು.

ಶ್ರೀ ಕೆ.ಹೆಚ್. ರಂಗನಾಥ್ : ಈ ಕೇಸ್ ಸುಪ್ರೀಂ ಕೋರ್ಟ್‌ನಲ್ಲಿಯೂ ತೀರ್ಮಾನವಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಒಂದು ನಿಮಿಷ ಈಲ್ಡ್ ಆದರೆ......

ಶ್ರೀ ಕೆ.ಹೆಚ್. ರಂಗನಾಥ್ : ಈಲ್ಡ್ ಆದರೆ ನನ್ನ ಥಾಟ್ಸ್ ಹೋಗುತ್ತದೆ. ತಾವು ಏನಾದರೂ ಹೇಳಬೇಕಾದರೆ ಆಮೇಲೆ ಹೇಳಿ. ನಾನು ಮುಗಿಸುತ್ತಾ ಬಂದಿದ್ದೇನೆ. ಚೀಫ್ ಜಸ್ಟಿಸ್ ವೆಂಕಟರಾಮಯ್ಯನವರು ಅವರ ಜೊತೆಗೆ ಜಸ್ಟಿಸ್ ಕೆ.ಎಸ್. ಸಿಂಗ್ ಅವರು ಇದು ಪ್ರಾಪರ್ ಅಲ್ಲ ಎಂದು ಹೇಳಿ ರಿಜೆಕ್ಟ್ ಮಾಡಿದ್ದಾರೆ. ಇದಾದಮೇಲೆ ಗೌರ್ನರ್‌ರವರ ಮುಂದೆ ಬರುತ್ತದೆ. ಗೌರ್ನರ್ ಅಡ್ವೈಸರ್ ಇದನ್ನು ತೆಗೆಸಿ ನೋಡುತ್ತಾರೆ. ಅಡ್ವೈಸರ್ ಕಾಲದಲ್ಲಿ ಆ ಆಫೀಸರ್ ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆ. ಅದೆಲ್ಲಾ ಈ ರೆಕಾರ್ಡ್‌ನಲ್ಲಿ ಇದೆ. ಅಡ್ವೋಕೇಟ್ ಜನರಲ್‌ರವರು ಸಹ ಇದನ್ನು ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ಆದರೂ ಏನು ವಿಚಾರ ಮಾಡುತ್ತಿದ್ದರೆಂದರೆ is not a case of reconveyance. This is a case of withdrawal ಎಂದು, ರೀಕನ್‌ವೇಯನ್ಸ್‌ಗೆ ಏತಕ್ಕೆ ಕಾರಣ ಬಂತು. 1987ರ ನಂತರ ಬಿಡಿಎ ಯಲ್ಲಿ ಬಲ್ಕ್ ಅಲಾಟ್‌ಮೆಂಟ್‌ನಲ್ಲಿ ಇವರಿಗೆ ಕೊಡಬಹುದೆಂದು ನಿರ್ಣಯ ಮಾಡುತ್ತಾರೆ. ಆ ಬಡಪಾಯಿಗಳು ಯಾರಿಗೆ ಜಾಗ ಅಲಾಟ್ ಆಗಿತ್ತೋ ಅವರು ಇದನ್ನು ಮಾಡಬೇಡಿ, ತಪ್ಪಾಗುತ್ತದೆ ನಾವೆಲ್ಲಾ ಕೋರ್ಟಿಗೆ ಹೋಗಿ ಬಂದಿದ್ದೇವೆಂದು ಕೇಳಿಕೊಂಡರೂ ಯಾರೂ ಅದನ್ನು ಕೇಳಲಿಲ್ಲ. BDA to some extent, at that stage is responsible for the creation of the problem. ಆಗ ವಿಧಿ ಇಲ್ಲದೆ ಹೈಕೋರ್ಟಿಗೆ ಹೋಗುತ್ತಾರೆ. ಹೈಕೋರ್ಟ್‌ಗೆ ಹೋದ ಮೇಲೆ ಅವರಂತೆ ಆಗುತ್ತದೆ. ಆಮೇಲೆ ವೀರೇಂದ್ರ ಪಾಟೀಲರ ಸರ್ಕಾರಕ್ಕಿಂತ ಹಿಂದೆ ಇದ್ದಂತಹ ಗೌರ್ನರ್ ಆಡಳಿತದಲ್ಲಿ ಅಡ್ವೈಸರ್ ಅಡ್ವೋಕೇಟ್ ಜನರಲ್‌ರವರನ್ನು ಕೇಳುತ್ತಾರೆ. ಲಾ-ಆಫೀಸರ್‌ರವರನ್ನು ಕೇಳುತ್ತಾರೆ. ಆದರೆ ಯಾರು ಸಹ ತೀರ್ಮಾನವನ್ನು ತೆಗೆದುಕೊಳ್ಳುವುದಿಲ್ಲ, ಜನತಾ ಸರ್ಕಾರ ಬಂದಮೇಲೆ ತೀರ್ಮಾನ ತೆಗೆದುಕೊಳ್ಳಲಿ ಎಂದು ಹೇಳುತ್ತಾರೆ. ವೀರೇಂದ್ರ ಪಾಟೀಲರ ಸರ್ಕಾರದವರು ರಿಜೆಕ್ಟ್ ಮಾಡುತ್ತಾರೆ.

That means to say that the minister has rejected. The Government has applied its mind and has rejected. How does the commissioner gets the

power to review the decision taken by the then chief Minister Sri. Veerendra Patil who has done it as the chief minister, I can't understand under any provision of law this could be done. I can understand if it comes before the present chief Minister and he applies his judicial mind to withdras the case, not on the flimsy grounds of not taking possession but on differet grounds.

ಸ್ವಾಮಿ, ಇದರಲ್ಲಿ ಕೆಲವರು ಅಂದರೆ ಫಾರಿನ್ ಅಫೇರ್ಸ್ ಮಿನಿಸ್ಟರ್ ಆಗಿ ಕೆಲಸಮಾಡತಕ್ಕವರಿಗೂ ಕೂಡ ಅಲಾಟ್ ಆಗಿದೆ. Even those people have been till today striving for this ಕೆಲವರಿಗೆ ಜಾಗ ಬೇರೆ ಕಡೆ ಕೊಡೋಣ, ಅಲ್ಲಿ ಏನೋ ತೊಂದರೆ ಇದೆ ಎಂದು ಹೇಳಿದ್ದಾರೆ. ಏಕೆಂದರೆ ಅಲ್ಲಿ ಕೆಲವರು ಅರ್ಧ ಮನೆ ಕಟ್ಟಿದ್ದಾರೆ. 198 ಸೈಟನ್ನು ಮಾಡಿ, 78 ರಲ್ಲಿ ಸ್ವಾಧೀನಕ್ಕೆ ತೆಗೆದುಕೊಂಡು ಆದ ಮೇಲೆ 170 ಸೈಟ್‌ಗಳನ್ನು ಬೇರೆಬೇರೆಯವರಿಗೆ ಕೊಟ್ಟಿದ್ದಾರೆ.

ಅಲ್ಲಿ ಮನೆಗಳು ಬಂದಿವೆ. ಹೀಗಿರುವಾಗ 27-12-90 ರ ಆರ್ಡರ್ ಏನಿದೆ, ಸೆಕ್ಷನ್ 63 ಬಿಡಿಎ ಆಕ್ಟ್ ಕೆಳಗೆ, ಇದನ್ನು ಉಪಯೋಗ ಮಾಡಿಕೊಂಡು ಸೆಕ್ಷನ್ 48 ಆಫ್ ದಿ ಲ್ಯಾಂಡ್ ಅಕ್ವಿಸಿಷನ್ ಆಕ್ಟ್ ಎಂದು ಹೇಳಿ ಇದನ್ನು ವಿತ್‌ಡ್ರಾ ಮಾಡಿದ್ದೇವೆ, ನೀವು ಜಾಗ್ರತೆ ಡೀನೋಟಿಫೈ ಮಾಡಿ you please report the compliance ಎಂದು ಹೇಳಿದ್ದಾರೆ. I cannot understand why this extra interest, What for? ಒಂದು ವೇಳೆ ನನ್ನಂಥವನು ಸುಮ್ಮನೆ ಮಾಡಿಲ್ಲ ಎನ್ನುವ ಆಪಾದನೆ ಮಾಡಿದರೆ, ಆ ಒಂದು ಅಭಿಪ್ರಾಯ, ಆ ಒಂದು ತೀರ್ಮಾನವನ್ನು ತಪ್ಪು ಎಂದು ನಾವು ಸಾಧಾರಣವಾಗಿ ಯಾರಾದರೂ ಹೇಳುವುದಕ್ಕೆ ಸಾಧ್ಯ ಆಗುತ್ತದೆಯೇ? ಬಹಳ ಅವಸರವಾಗಿ ತೀರ್ಮಾನವನ್ನು ತೆಗೆದುಕೊಂಡಿದ್ದಾರಲ್ಲ, ನೀವೇನು ಬಿಟ್ಟಿ ಮಾಡಿರುವುದಿಲ್ಲವೆಂದು ನನ್ನಂಥವನು ಯಾರಾದರೂ ಹೇಳಿದರೆ, ತಪ್ಪೆಂದು ಯಾರಾದರೂ ಹೇಳುವುದಕ್ಕೆ ಸಾಧ್ಯವಿದೆಯೇ? ಇರಬಹುದು ಎಂದು ಎಲ್ಲರೂ ಒಪ್ಪುತ್ತಾರೆ. ಮುಖ್ಯಮಂತ್ರಿಯವರು ರಿಜೆಕ್ಟ್ ಮಾಡಿದ ಒಂದು ತಿಂಗಳೊಳಗೆ ಅರ್ಜಿಯನ್ನು ತೆಗೆದುಕೊಂಡು ಡಿಸೆಂಬರ್ 27ಕ್ಕೆ ಇಂಥ ಒಂದು ಆರ್ಡರನ್ನು ಬರೆದ ಮೇಲೆ, ಇದರಲ್ಲಿ ಏನಿದೆ ಎಂದು ಅರ್ಥವಾಗುತ್ತದೆ. ಇಷ್ಟು ತ್ವರಿತಗತಿಯಲ್ಲಿ ಈ ಇಲಾಖೆಗಳಿಂದ ಕೆಲಸ ಆಗುವುದಿದ್ದರೆ, ಆಡಳಿತ ಸುಧಾರಣೆ ಬಗ್ಗೆ ಮುಖ್ಯ ಮಂತ್ರಿಯವರು ಏನು ಬಿಲ್ಲ್‌ನ್ನು ತರುತ್ತಿದ್ದಾರೆ, ಅದು ಅನಾವಶ್ಯಕವಾದುದು ಎಂದು ನನ್ನ ಭಾವನೆ. ಇದು ಇಷ್ಟು ತ್ವರಿತ ಗತಿಯಲ್ಲಿ ಓಡುತ್ತಿದೆ. ಇದು ಸಣ್ಣ ವಿಚಾರವಲ್ಲ, ದೊಡ್ಡ ವಿಚಾರ. ಈ ಬಡಪಾಯಿಗಳು ಕೋರ್ಟ್‌ನಿಂದ ಕೋರ್ಟ್‌ಗೆ ಓಡಾಡಿದ ಬಗ್ಗೆ ಎಲ್ಲಾ ದಾಖಲೆಗಳು ಇವೆ. ಸ್ವಾಧೀನ ತೆಗೆದುಕೊಂಡಿದ್ದು, ಅವರೇ ಸ್ವಾಧೀನ ಕೊಟ್ಟಿದ್ದು, ಕಾಂಪೆನ್‌ಸೇಶನ್ ಡಿಪಾಸಿಟ್ ಮಾಡಿದ್ದು ಹೀಗೆ ಎಲ್ಲದರ ಬಗ್ಗೆ ನನ್ನಲ್ಲಿ ಮಾಹಿತಿ ಇದೆ. ಆದ್ದರಿಂದ ಆ ಬಡ ಜನರಿಗೆ ರಕ್ಷಣೆಯನ್ನು ಕೊಡುವಂಥ ಕೆಲಸ ಆಗಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ಇದನ್ನು ಯಾರೂ ಮಾಡದಿದ್ದರೆ, ತಾವು ಮಾಡಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಪಂಜಾಬ್‌ನಲ್ಲಿ ಒಂದು ನಿದರ್ಶನ ಇದೆ. ಕುರುಡರಿಗೆ ತೊಂದರೆಯಾದಾಗ, ಅಂಥ ಸಂದರ್ಭದಲ್ಲಿ ಪಂಜಾಬ್ ಅಸೆಂಬ್ಲಿಯ ಅಧ್ಯಕ್ಷರೇ ಅವರಿಗೆ ರಕ್ಷಣೆ ಕೊಟ್ಟಿರುವ ಒಂದು ನಿದರ್ಶನ ಇದೆ. ಯಾರೂ ಸಹಾಯ ಮಾಡದಿದ್ದರೂ, ಈ ಸಾರ್ವಭೌಮ

ಸಭೆಯ ಅಧ್ಯಕ್ಷರಾದ ತಾವು ತಮ್ಮ ಅಧಿಕಾರವನ್ನು ಉಪಯೋಗಿಸಿಕೊಂಡು ಇದರ ಬಗ್ಗೆ ಒಂದು ತೀರ್ಮಾನವನ್ನು ಕೊಟ್ಟು, ಒಂದು precedent ನ್ನು ತಾವು ಕ್ರಿಯೇಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸಂಬಂಧಪಟ್ಟ ಅಧಿಕಾರಿಗಳನ್ನು ನಾಳೆಯೇ ಕೆಲಸದಿಂದ ತೆಗೆದು ಹಾಕಿ ವಿಚಾರಣೆ ಮಾಡಬೇಕು ಅವರು intentionally, will ful ಆಗಿ ಮಾಡಿದ್ದಾರೆಂದು ಕಂಡು ಬಂದರೆ, either by circumstantial, evidence or by direct evidence ಇದ್ದರೆ ಅವರಿಗೆ ಕೂಡಲೇ ಶಿಕ್ಷೆಯಾಗಬೇಕು. ನಮ್ಮ ಕರ್ನಾಟಕ ರಾಜ್ಯ ಸೇವೆಯಿಂದ ಅವರನ್ನು ತೆಗೆದು ಹೊರಗೆ ಕಳಿಸಬೇಕಾಗುತ್ತದೆ. ಏಕೆಂದರೆ ಹಳೆಯ ಮೈಸೂರ್ ಮತ್ತು ಕರ್ನಾಟಕ-ಬಾಂಬೆ ಪ್ರದೇಶದಲ್ಲಿ ಕಾನೂನು ಪ್ರಕಾರ ಕೆಲಸ ಮಾಡುವಂಥ ಸರ್ಕಾರಗಳು ಇದ್ದವು. ಇಂದು ಇಂಥ ವಿಚಾರಗಳಿಂದ ನಾವು ಹೊರಗೆ ಹೋದಾಗ ಯಾರಾದರೂ ಇದ್ದಾಗ ತಲೆಯನ್ನು ತಗ್ಗಿಸುವ ಪರಿಸ್ಥಿತಿ ಬರುತ್ತದೆ. 224 ಸದಸ್ಯರು ಇರುವಂಥ ಈ ಒಂದು ಸದನ, ಈ ಸಭೆ ಕೆಲಸಕ್ಕೆ ಬಾರದ ಒಂದು ಸಭೆ ನಿರ್ವೀರ್ಯ ಹೊಂದಿದ ಸಭೆ ಎನ್ನುವ ಭಾವನೆ ಜನರಿಗೆ ಬರಬಾರದು. It has totally become importent. ಅನ್ನುವ ಭಾವನೆ ಜನರಲ್ಲಿ ಬರುತ್ತಾ ಇರುವುದರಿಂದ ನಾನು ಮುಖ್ಯ ಮಂತ್ರಿಗಳಲ್ಲಿ ವಿನಂತಿಪೂರ್ವಕವಾಗಿ ಕೇಳುತ್ತಿದ್ದೇನೆ. ಏತಕ್ಕೆಂದರೆ ಇದನ್ನು ಯಾರಾದರೂ ಓದಿದರೆ, ಮುಖ್ಯ ಮಂತ್ರಿಗಳು ಇಲ್ಲವೇ ಸಂಬಂಧಪಟ್ಟ ಪೋರ್ಟ್‌ಫೋಲಿಯೋವನ್ನು ಹೊಂದಿರುವಂಥ ಮಂತ್ರಿಗಳು ಆದೇಶವನ್ನು ಕೊಟ್ಟಿರಬಹುದು ಇಲ್ಲದೇ ಹೋದರೆ, how dare would have been the secretary or the commissioner to take such a decision? ಈ ರೀತಿಯಾಗಿ ಯಾರಾದರೂ ಒಂದು ಅಭಿಪ್ರಾಯಕ್ಕೆ ಬರುತ್ತಾರೆ. ಹಾಗಿಲ್ಲದಿದ್ದರೆ ಇವರಿಗೆ ಇದರ ಬಗ್ಗೆ ನ್ಯಾಯ ಒದಗಿಸಿಕೊಡಬೇಕೆಂದು ಹೇಳುತ್ತಾ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ, ವಂದನೆಗಳು.

+ ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಅಧ್ಯಕ್ಷರೇ, ನನ್ನ ಗೆಳೆಯರಾದ ಶ್ರೀ ರಂಗನಾಥ್‌ರವರು ಈ ವಿಚಾರದ ಬಗ್ಗೆ ಎಲ್ಲವನ್ನೂ ಕೂಲಂಕಷವಾಗಿ ತಿಳಿಸಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ : ಗೆಳೆಯ ಎಂದರು ಸರಿ. I am hon'ble member of this august house sir.

SRI. K. LAKKAPPA : More than that, he is my friend, I said he is sitting here as an MLA, More than that I said ಗೆಳೆಯ.

Sri. M.V. Venkatappa : Do you have enemies also?

ಶ್ರೀ ಕೆ. ಲಕ್ಕಪ್ಪ : ನಾವು ನಮ್ಮ ಮುಖ್ಯ ಮಂತ್ರಿಯವರಿಗೆ ಒಂದು ಕಿವಿಮಾತನ್ನು ಹೇಳಬೇಕಾಗಿದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಯವರನ್ನು ನಮ್ಮ ನಾಯಕರನ್ನಾಗಿ ಮಾಡಿದಾಗ, ನಾವು ರಸ್ತೆ ರಸ್ತೆಯಲ್ಲಿ ರಾಜ ಭವನದ ಬೀದಿಯಲ್ಲಿ ಎಲ್ಲರೂ ಸೇರಿ, ಇವರು ಸಮಾಜವಾದಿಗಳೆಂಬ ಹಿನ್ನೆಲೆಯಲ್ಲಿ ಇವರು ಮುಖ್ಯ ಮಂತ್ರಿಗಳಾಗಬೇಕೆಂದು ಒತ್ತಾಯ ಮಾಡಿದಂಥವರು.

ಜೊತೆಗೆ ಇವರು ವಿರೋಧಪಕ್ಷದ ಸ್ಥಾನದಲ್ಲಿ ಕುಳಿತಿದ್ದಾಗ, ಇದೇ ವಿಷಯಗಳು ಬಂದಾಗ, ಇಂತಹ ಭೂ ಹಗರಣಗಳ ವಿಚಾರದ ಬಗ್ಗೆ ಹಿಂದಿನ ಸರ್ಕಾರದ ಮೇಲೆ ತೀವ್ರವಾದಂಥ ಟೀಕೆಯನ್ನು ತಾವು ಮಾಡದಿರಿ. ಅಲ್ಲದೆ, ಈ ಬಗ್ಗೆ

ನಮ್ಮ ಸರ್ಕಾರ ಬಂದರೆ ನಾವು ಬೇರೆ ನಿಲುವನ್ನು ತೆಗೆದುಕೊಂಡು ಸಾರ್ವಜನಿಕ ಹಿತದೃಷ್ಟಿಯಿಂದ ಸ್ವಚ್ಛವಾದಂಥ ಆಡಳಿತವನ್ನು ಕೊಡುತ್ತೇವೆಂದು ಹೇಳಿದ್ದೀರಿ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇಲ್ಲಿ 25-26ಎಕರೆ ಭೂಮಿಯನ್ನು ಮೆ:ಮೋಹನ್ ಮೆಕಿನ್ಸ್ ಕೊಟ್ಟಿದ್ದು ತಮಗೆಲ್ಲಾ ಗೊತ್ತಿದೆ. ಅವರು ದೆಹಲಿಯಲ್ಲಿ ಒಬ್ಬ ದೊಡ್ಡ ಕೈಗಾರಿಕೋದ್ಯಮಿಗಳು. ಆದರೆ, ಇಲ್ಲಿ 25-26 ಎಕರೆಗಳಷ್ಟು ಜಮೀನನ್ನು ಅವರಿಸಿಕೊಂಡಿರತಕ್ಕ ಕಾರ್ಖಾನೆಯಲ್ಲಿ ಇಪ್ಪತ್ತು ಜನರೂ ಸಹಾ ಕೆಲಸ ಮಾಡುತ್ತಿಲ್ಲ. ಅದನು Thriving Industryಎಂದು ಬರೆದಿದ್ದಾರೆ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. It is not a thriving industry at all. It is one of the declining industries where workers are not at all working. Only 25 People are working.

ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, 1988ರಲ್ಲಿ ಈ ಒಂದು ಕಾನೂನಿನ ವಿರುದ್ಧ ಅವರು ಅರ್ಜಿ ಕೊಟ್ಟಾಗ, ಬೇರೆ ಕೋರ್ಟ್‌ಗಳಲ್ಲಿ ಬೇರೆ ತೀರ್ಮಾನಗಳು ಆದಾಗ ಬಲ್ಕ್ ಅಲಾಟ್‌ಮೆಂಟನ್ನು ಮಾಡಬಾರದು, ಆದರೆ ನಂ.964 ದಿನಾಂಕ:29.3.88 "Resoloved to bulk allot the land to the landlords and to allot alternate site to the allottees. When it was acquired in 1975 and Notification was issued in 1977, and Published in the Gazette in 1977, Rs 29 and odd lakhs have been paid as compensation.

ಡಿಫಾಸಿಟ್ ಮಾಡಿದ್ದಾರೆ. on that basis the intention was ಮಹಾಲಕ್ಷ್ಮಿ ಲೇಔಟ್‌ನಲ್ಲಿ ಜನರು ಅರ್ಜಿಗಳನ್ನು ಬಹಳ ವರ್ಷಗಳಿಂದ ಹಾಕಿಕೊಂಡಿದ್ದಾರೆ. ಅವರು ಅಲ್ಲಿ ಮನೆ ಕೇಳುತ್ತಿದ್ದಾರೆ. ಮನೆ ಇಲ್ಲದಂಥವರಿಗೆ ಅದನ್ನು ಮಾಡಬೇಕೆಂದು ಬಿಡಿಎ ಉದ್ದೇಶ ಬಹಳ ಸಾರ್ಥಕವಾದಂತಕ್ಕಂಥಾದ್ದು. ಬಿಡಿಎನವರಿಗೆ ಆ ಉದ್ದೇಶ ಇತ್ತು, ಅದಕ್ಕೋಸ್ಕರ ಅದನ್ನು ಮಾಡಿದರು ಆದರೆ, ಈ ಕಂಪನಿಯವರು ಬಹಳ ಸಾಹಸ ಮಾಡಿದ್ದಾರೆ. ಸಾಹಸ ಮಾಡುವುದಕ್ಕೆ ಅವರಿಗೆ ಅವಕಾಶವಿದೆ. ಏಕೆಂದರೆ, ಬಿಡಿಎನಲ್ಲಿ ಬಡವರು ಅರ್ಜಿಗಳನ್ನು ಹಾಕಿಕೊಂಡರೆ ಏನೂ ಇತ್ಯರ್ಥವಾಗುವುದಿಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನೂರು ಜನರು ಇದೇ ರೀತಿಯಲ್ಲಿ ಸೈಟಿಗೋಸ್ಕರ ಕಾಯುತ್ತಿದ್ದಾರೆ. ಇನ್ನೂ ಕೂಡ ಅವರಿಗೆ ಸಿಕ್ಕಿಲ್ಲ. ಈ ಜಾಗವನ್ನು ಅಕ್ವಿಜಿಶನ್ ಮಾಡಿ, ಅವರಿಗೆ ಅಲಾಟ್‌ಮೆಂಟ್ ಮಾಡಿಕೊಟ್ಟಿಲ್ಲ. ಆದರೆ, ಈ ಕೇಸ್‌ನಲ್ಲಿ ಅಲಾಟ್‌ಮೆಂಟ್ ಆಗಿದೆ. ಸುಮಾರು ಒಂಬತ್ತು ಜನರಿಗೆ ಕೊಟ್ಟಿದ್ದಾರೆ. ಅವರು ಅರ್ಧ ಮನೆ ಕಟ್ಟಿದ್ದಾರೆ. ಇವರು ಈಗಾಗಲೇ ಪೊಜಿಶನ್‌ನಲ್ಲಿದ್ದಾರೆ. 1988ರಲ್ಲಿ ಅಲಾಟ್‌ಮೆಂಟ್ ಕೊಡಬಾರದೆಂದು ಕೋರ್ಟ್ ತೀರ್ಮಾನ ಮಾಡಿತ್ತು. ಇದಕ್ಕಿಂತ ಮೊದಲು ಅನೇಕ ಕೋರ್ಟ್‌ಗಳು ತೀರ್ಮಾನ ಮಾಡಿದ್ದವು. ಸಿವಿಲ್ ಕೋರ್ಟ್‌ನವರು ಎಲ್ಲಿಯವರೆಗೆ ಹೋದರೆಂದರೆ all the courts he has controlled and he has filed cases. ಈ ಸಿವಿಲ್ ಕೋರ್ಟ್ ಕೂಡ ಏನು ಹೇಳುತ್ತದೆಂದರೆ:

M/s Mohan Mekins has no locus standi over the said property and that they are holding it illegally and therefore they are tresspassers. When they are tresspassers it was for the Secretary or anybody who is incharge, could have taken prosecution against that man. Instead of prosecution, he has been honoured everywhere and in every office ಆಫೀಸರ್ಸ್ ಎಲ್ಲಾ ಬಂದು

ಅವರಿಗೆ ಬಹಳ ಅನ್ಯಾಯಮಾನವಾಗಿ, ಪ್ರೀತಿಪೂರ್ವಕವಾಗಿ ಅವರನ್ನು ನೋಡಿಕೊಂಡು ಈ ಕೆಲಸವನ್ನೆಲ್ಲಾ ನಡೆಸಿದ್ದಾರೆ. ತಾವು ರಾಮಕೃಷ್ಣ ಹೆಗಡೆಯವರಿಗೆ ಬಲ್ಕ್ ಅಲಾಟ್‌ಮೆಂಟ್ ಬಗ್ಗೆ ನಾನು ವಿರೋಧ ಮಾಡುತ್ತೇನೆಂದು ಹೇಳಿದ್ದೀರಿ. ತಾವು ಈಗ ಮುಖ್ಯಮಂತ್ರಿಯಾಗಿದ್ದೀರಿ ವಿರೋಧಪಕ್ಷದ ನಾಯಕರಾಗಿ ಹೇಳಿದಂಥ ಮಾತನ್ನು ತಾವು ಗಮನಕ್ಕೆ ತೆಗೆದುಕೊಂಡು ಇಲ್ಲಿ ತೀರ್ಮಾನ ಮಾಡಬೇಕು. ತಮ್ಮ ಕಣ್ಣಿಗೆ ಒಟ್ಟೆಯನ್ನು ಕಟ್ಟಿ. ನಿಮ್ಮ ಕಾರ್ಯದರ್ಶಿಯವರು ಈ ಅಧಿಕಾರವನ್ನು ಉಪಯೋಗಿಸುವುದಕ್ಕೆ ಕಾರಣವೇನು ಎನ್ನತಕ್ಕದ್ದನ್ನು ಜನರು ಕೇಳುತ್ತಿದ್ದಾರೆ. ಈ ಕಾರ್ಯದರ್ಶಿಯು ನಮ್ಮ ಸರ್ಕಾರದ ಬಗ್ಗೆ, ನಮ್ಮ ನಾಯಕರ ಬಗ್ಗೆ ಕೆಟ್ಟ ಅಭಿಪ್ರಾಯವನ್ನು ಮೂಡಿಸಲು ಏನಾದರೂ ಏರ್ಪಾಡು ಮಾಡಿದ್ದರೆ, ಮುಖಕ್ಕೆ ಮಸಿ ಹಚ್ಚತಕ್ಕ ಪ್ರಯತ್ನವಾಗಿದ್ದರೆ, ಅದು ಈ ಪ್ರಯತ್ನದಿಂದಲೇ ಎಂದು ನಾನು ಹೇಳುತ್ತೇನೆ. ಬಹುಶಃ ಇದು ಇವರ ಗಮನಕ್ಕೆ ಮೊದಲೇ ಬಂದಿದ್ದರೆ ಇವರು ತೀರ್ಮಾನವನ್ನೇ ಮಾಡುತ್ತಿರಲಿಲ್ಲ. ಇದು ಸಣ್ಣ ಹಗರಣವೇನಲ್ಲ, ದೊಡ್ಡ ಹಗರಣ. ಇದೇ ರೀತಿ ಇರತಕ್ಕ ಕೇಸ್‌ಗಳನ್ನು ನೀವು ಏತಕ್ಕೆ ತೀರ್ಮಾನ ಮಾಡಲಿಲ್ಲ. ಇದೇ ರೀತಿ ನೂರು ಜನರು ಕಾಯುತ್ತಿದ್ದಾರೆ. ಒಂದು ಎಕರೆ, ಎರಡು ಎಕರೆ, ಒಂದೂವರೆ ಎಕರೆ ಇಟ್ಟುಕೊಂಡಿರುವ ಅಲ್ಲಿನ ಜನರೆಲ್ಲೂ ಕಾಯುತ್ತಿದ್ದಾರೆ. ಅದನ್ನು ನೀವು ಅಕ್ವೈರ್ ಮಾಡಿಕೊಳ್ಳಲು ಏತಕ್ಕೆ ಡೀ ನೋಟಿಫಿಕೇಷನ್ ಮಾಡಲಿಲ್ಲ. ಈಗ ಇದನ್ನು ಮಾಡಿ ಆದಮೇಲೆ ನೀವು ಈ ನೂರು ಜನರಿಗೂ ಕೂಡ ಮಾಡಬೇಕಾಗುತ್ತದೆ. where you have applied Rule of Law? Everybody is equal. ಅವರೂ ಕೂಡ ಸೈಟಿಗೆ ಹಾಕಿದ್ದಾರೆ. ಇವರು, ಅಂದರೆ ಕಂಪನಿಯವರು ನಮಗೆ ಕೊಡಬೇಕೆಂದು ಅರ್ಜಿ ಹಾಕಿದ್ದಾರೆ. ಬಡವರ ಜಾಗವೆಲ್ಲಾ ಅಕ್ವೈರ್ ಆಗಿದೆ. ಹಾಗೆಯೇ ಕಂಪನಿಯವರದ್ದೂ ಕೂಡ ಅಕ್ವೈರ್ ಆಗಬಾರದೇನು? ಇಂದು ನಮ್ಮ ಜನರಿಗೆ ಬಡಾವಣೆಗೆ ಮನೆಗಳನ್ನು ಕಟ್ಟಲು ಅವಕಾಶವನ್ನು ಕೊಡಬಾರದೇನು. ಇಂತಹ ಪರಿಸ್ಥಿತಿ ಇದೆಯಲ್ಲಾ... ಅವರು ಹೆಸರನ್ನೂ ಕೂಡ ಬರೆದಿದ್ದಾರೆ ಅದರೆ ಅದನು ಹೇಳಲು ಹೋಗುವುದಿಲ್ಲ. I don't want to mention the name of anybody . The Secretary has passed the order under Section 63 of the B.D.A. Act. ಎಷ್ಟು ಆಕ್ಟ್ ಆದಮೇಲೆ, ಬಿ.ಡಿ.ಎ.ನ ರೆಸಲ್ಯೂಷನ್ ಆದಮೇಲೆ, ಪ್ರೊಸಿಷನ್ ತೆಗೆದುಕೊಂಡ ಮೇಲೆ ಪುನಃ He has revoked the B.D.A. act. Where is the provision? I don't know. In one stroke and one single sitting he had withdrawn the entire land in favour of Mohan Meikins on 27.12.90, To implement this order, again the matter went to the Court and there it was decided in his favour. He came to the notice of Mr. Veerendra Patil's Government. I don't know how it came to the notice of Mr. Veerendra patil. Probably he was the H.U.D. Minister and that is how it came to his notice. Otherwise, they would have passed the order without notice or anybody and such cases have been also one in entire . B.D.A activities, ಇಂತಹ ಪರಿಸ್ಥಿತಿಯಲ್ಲಿ ಶ್ರೀಮಾನ್ ವೀರೇಂದ್ರ ಪಾಟೀಲರು, ಇದನ್ನು ಸರಿಯಾದ ರೀತಿಯಲ್ಲಿ ವಿಮರ್ಶೆ ಮಾಡಿ, ಇದರಲ್ಲಿ ಅನ್ಯಾಯವಾಗಿದೆ, ಮತ್ತೆ ಇದರಲ್ಲಿ ಅಧಿಕಾರವನ್ನು ಚಲಾವಣೆ ಮಾಡಲು ಅಧಿಕಾರವಿಲ್ಲವೆನ್ನತಕ್ಕ ಸ್ಪಷ್ಟವಾದ ನಿಲುವನ್ನು ಸರ್ಕಾರ ತೆಗೆದುಕೊಂಡು ಆಜ್ಞೆಯನ್ನು ಹೊರಡಿಸಿತು. ಒಂದು ಸರ್ಕಾರದಿಂದ ಸಾಮಾನ್ಯವಾಗಿ ಆಜ್ಞೆಯಾದಮೇಲೆ ಮತ್ತೊಂದು ಸರ್ಕಾರದಲ್ಲಿ ಒಂದು

ಅಧಿಕಾರಿಗಳು ನಮ್ಮ ಸರ್ಕಾರದ ನಾಯಕತ್ವದ ಹಿಂದೆ, ಅವರ ಗಮನಕ್ಕೆ ತರದೆ ಈ ಅಧಿಕಾರವನ್ನು ಚಲಾಯಿಸಿದ್ದರೆ, ಬದಲಾಯಿಸಿದ್ದರೆ, ಇದು ಯಾವ ಅಧಿಕಾರ, ಯಾವುದುಕ್ಕೋಸ್ಕರವಾಯಿತು. ಕೈ ಎಷ್ಟು ಗ್ರೀಸ್ ಆಗಿದೆ ಇದೆಲ್ಲವನ್ನೂ ನಾವು ಹೇಳಬೇಕಾಗುತ್ತದೆ. ಆದುದರಿಂದ ಇದು ಅಧಿಕಾರ ಶಾಯಿ ಧೋರಣೆ ಇದು ಒಂದೇ ಇಲಾಖೆಯಲ್ಲ, ಅನೇಕ ಇಲಾಖೆಗಳಲ್ಲಿ ಈ ರೀತಿ ಕಾಣುತ್ತಿದೆ. ಆದುದರಿಂದ ಈ ಧೋರಣೆಯನ್ನು ನಿಲ್ಲಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು. ನಿಮಗೆ ಕೆಟ್ಟ ಹೆಸರು ಬಂದರೆ, ನಮಗೆ ಬರುತ್ತದೆ, ಸರ್ಕಾರಕ್ಕೆ ಕೆಟ್ಟ ಬಂದರೆ ನಮ್ಮ ಪಕ್ಷಕ್ಕೆ ಬರುತ್ತದೆ, ಇಡೀ ಜನತೆಗೆ ಬರುತ್ತದೆ. ಇಂತಹ ಪರಿಸ್ಥಿತಿಯನ್ನು ವಾತಾವರಣವನ್ನು ಸೃಷ್ಟಿಮಾಡತಕ್ಕ ಅಧಿಕಾರಿ ಮಿತ್ರರಿದ್ದರೆ ಅವರನ್ನು ದಯಮಾಡಿ ಇಲ್ಲಿಂದ ಹೊರಗಡೆ ಕಳಿಸಬೇಕು ಎನ್ನುವುದೇ ನಮ್ಮ ವಾದ. ಅವರಿಗೆ ಕೊಡಬೇಕು, ಏಕೆಂದರೆ ಸಿವಿಲ್ ಕೋರ್ಟ್‌ನವರು ಇವರನ್ನು tresspassers ಎಂದು ಹೇಳಿದ ಮೇಲೆ You could have prosecuted. Instead of prosecuting them. They are honoured. He should he prosecuted now ಏಕೆಂದರೆ. ಇದು ಕೋಟಿಗಟ್ಟಲೆ ಹಣದ ವ್ಯವಹಾರ, ಇದು ಸಣ್ಣಪುಟ್ಟ ವ್ಯವಹಾರವಲ್ಲ. ಇದರ ಹಿಂದೆ ಯಾವ ಕೈವಾಡವಿದೆಯೆಂದು ಹೇಳುವುಗಕ್ಕೆ ನನಗೆ ಗೊತ್ತಿಲ್ಲ. ಅಂತೂ ಇಂತಹ ಅನ್ಯಾಯ ಅಕ್ರಮಗಳು ನಡೆಯುತ್ತಾ ಇವೆ. ನಮ್ಮ ಮುಖ್ಯಮಂತ್ರಿಗಳು ಅವರ ಹಿಂದಿನ ಸಮಾಜವಾದ ತತ್ವ ಹಾಗೂ ನೀತಿಗಳನ್ನು ಪುನಃ ನೆನಪಿಸಿಕೊಳ್ಳಬೇಕು. ನಿಮ್ಮ ಸಹಾಯಕ್ಕೆ ನಾವು ಇದ್ದೇವೆ. ಇಂತಹ ಘಟನೆಗಳು ನಡೆಯುದಂತೆ ನೋಡಿಕೊಳ್ಳದೆ ಹೋದರೆ ಈ ರಾಜ್ಯದಲ್ಲಿ ನಾವು ಅರಾಜಕತೆಯನ್ನು ಬೇಗ ನೋಡಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ಅಧಿಕಾರಿಗಳು ಯಾವ ಇಲಾಖೆಗೆ ಸಂಬಂಧಪಟ್ಟವಾಗಿರಲಿ, ಸಾಮಾನ್ಯ ಜನರಿಗೆ ಏನು ಕಾನೂನು ಇದೆಯೋ ಆ ಕಾನೂನನ್ನೇ ನೀವು ಎಲ್ಲರಿಗೂ ಅನ್ವಯ ಮಾಡಬೇಕು. ಮತ್ತೆ ಯಾವ ರೀತಿಯಲ್ಲಿ ಅನ್ಯಾಯವಾಗಿದೆಯೋ ಅದನ್ನು ಸರಿಪಡಿಸುವುದಕ್ಕೆ ಮತ್ತು ಅಧಿಕಾರಿ ಶಾಹಿಗಳ ವಿರುದ್ಧ ಶಿಕ್ಷೆಯನ್ನು ಕೊಡುವುದಕ್ಕೆ ತಾವು ಹೆದರಬೇಡಿ, ನಿಮ್ಮ ಸಹಾಯಕ್ಕೆ ನಾವು ಇದ್ದೇವೆ. ಇಂತಹ ಕೆಲಸಕ್ಕೆ ನಮ್ಮ ಬೆಂಬಲವಿದೆ. ಈ ಅಕ್ರಮ ಅನ್ಯಾಯಗಳನ್ನು ತಡೆಹಿಡಿದು ಅಧಿಕಾರಿಶಾಹಿ ಧೋರಣೆಯನ್ನು ನಿಲ್ಲಿಸುವುದಕ್ಕೆ ಪ್ರಯತ್ನವನ್ನು ಮಾಡಿದರೆ ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕೆ ಅವಕಾಶವಾಗುತ್ತದೆ. ಏಕೆಂದರೆ ಕಾನೂನನ್ನು ಶಾಸಕರು ಮಾಡುವುದಿಲ್ಲ. ಕಾನೂನನ್ನು ಈಗ ಹೈಕೋರ್ಟ್‌ನವರು ಮಾಡುತ್ತಿದ್ದಾರೆ. ಏಕೆಂದರೆ ತಾವು ತಪ್ಪು ಕಾನೂನುಗಳನ್ನು ಬರೆಯುತ್ತೇವೆ, ಅವರು ಕೋರ್ಟ್‌ಗೆ ಹೋಗುತ್ತಾರೆ. ಕೋರ್ಟ್‌ನವರು ಲೆಜಿಸಲೇಷನ್ ಮಾಡಿ ಕಳುಹಿಸುತ್ತಾರೆ. ನಾವು ಅದನ್ನು ಒಪ್ಪಬೇಕು. ಹೈಕೋರ್ಟ್ ಇದ್ದರೆ ಸಾಕು. ಜ್ಯುಡಿಷಿಯರಿ ಸಾಕು ಲೆಜಿಸ್‌ಲೇಟರ್ಸ್ ಏಕೆ ಬೇಕು? ಆದುದರಿಂದ ಇಲ್ಲಿ ನಿಷ್ಪಕ್ಷಪಾತವಾದಂಥ ಒಂದು ಪ್ರಾಮಾಣಿಕವಾದ ನ್ಯಾಯ ದೊರಕುತ್ತದೆ ಎನ್ನುವ ಉದ್ದೇಶದಿಂದ ಈ ಲೆಜಿಸ್‌ಲೇಚರ್‌ನಲ್ಲಿ ನಾವು ಡೆಮಾಕ್ರಸಿಯನ್ನು ನಂಬಿ ಇಲ್ಲಿ ಬಂದಿದ್ದೇವೆ. ಅವರೂ ಬಂದು ಕುಳಿತ್ತಿದ್ದಾರೆ. ನಾವೆಲ್ಲರೂ ಸೇರಿ ಈ ಅಧಿಕಾರಿ ಶಾಹಿ ಏನು ಇದೆ, ಅದನ್ನು ಓಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ಅಕ್ರಮ ಮಾರ್ಗಗಳಿಂದ ಈ ರೀತಿ ಸಕ್ರಮ ಮಾಡುವಂತಹ ಕೆಲಸಗಳನ್ನು ಮಾಡುವುದಕ್ಕೆ ಹೋಗುವುದು ಬೇಡಿ. ಎಲ್ಲದಕ್ಕಿಂತ ಹೆಚ್ಚಾಗಿ ನಿಮ್ಮ ನಾಯಕತ್ವದಲ್ಲಿ ನಾವು ನಮ್ಮ ಕರ್ನಾಟಕ ರಾಜ್ಯದ ಆಡಳಿತ ಶುದ್ಧೀಕರಣ ಆಗುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾವು ಬಹಳ ದಿವಸಗಳಿಂದ ಪ್ರಯತ್ನ ಮಾಡುತ್ತಿದ್ದೇವೆ. ಆದರೆ

ಈ ದಿವಸ ಇಂತಹ ಪ್ರಕರಣಗಳು ಬೆಳಕಿಗೆ ಬಂದಾಗ ಜನಗಳ ಮುಂದೆ ನಾವು ಹೋಗಿ ನಿಂತರೆ ಜನಗಳು ನಮ್ಮನ್ನು ಏನು ಭಾವನೆಯಿಂದ ಕಾಣುತ್ತಾರೆ ಎನ್ನುವುದನ್ನು ನಾವು ವಿಚಾರ ಮಾಡಬೇಕು. ಇದೊಂದು ಮಹತ್ವಪೂರ್ಣವಾದಂತಹ ವಿಚಾರ ಎನ್ನುವಂತಹ ಪ್ರಶ್ನೆಯಲ್ಲ. ಆದರೆ ಎಲ್ಲಿ ಅಧಿಕಾರಿ ಶಾಹಿಯವರು ರೂಲ್ಸ್‌ನ್ನು ಉಲ್ಲಂಘನೆ ಮಾಡಿ ಅದನ್ನು ಸರ್ಕಾರದ ಗಮನಕ್ಕೆ ತರದೇ ಅಧಿಕಾರಿ ಶಾಹಿ ಧೋರಣೆಯಿಂದ ಕೆಲಸ ಮಾಡಿ ಈ ರಾಜ್ಯದ ಸಂಪತ್ತನ್ನು ಸರ್ವನಾಶ ಮಾಡುತ್ತಿದ್ದಾರೆ. ಸಾವಿರಾರು ಜನ ಬಿ.ಡಿ.ಎ.ಗೆ ಅರ್ಜಿ ಹಾಕಿದ್ದಾರೆ. ಆದರೂ ಅವರಿಗೆ ಏತಕ್ಕೆ ನ್ಯಾಯ ದೊರಕಲಿಲ್ಲ? ಇಂತಹ ಕಾನೂನನ್ನು ಏತಕ್ಕೆ ಅಳವಡಿಸಲಿಲ್ಲ. 100 ಜನ ಇಂತಹವರು ಇದ್ದಾಗ ಅದನ್ನು ಸಹ ಒಂದೇ ಸಿಟ್ಟಿಂಗ್‌ನಲ್ಲಿ ಪಾಸ್ ಮಾಡಬೇಕಾಗಿತ್ತು. ಆದರೆ ಅದನ್ನು ಏಕೆ ಮಾಡಲಿಲ್ಲ? ಆ ಅರ್ಜಿಗಳನ್ನು ತರಿಸಿ ಈ ಸಭೆಯಲ್ಲಿ ಮಂಡಿಸಿ, ಅದನ್ನು ತೀರ್ಮಾನ ಮಾಡೋಣ. ಏತಕ್ಕೋಸ್ಕರ ಇಂಥಾದ್ದು ಮಾತ್ರ ತೀವ್ರವಾಗಿ ನಡೆಯುತ್ತಿದೆಯೆಂದು ನೋಡೋಣ.

ಶ್ರೀ ಕೆ.ಹೆಚ್. ರಂಗನಾಥ್ : ತೀರ್ಮಾನ ಮಾಡಬೇಕೆಂದು ನಮ್ಮ ಸ್ನೇಹಿತರು ಹೇಳಿದರೆ ಅದನ್ನು ನಾನು ಒಪ್ಪುವುದಿಲ್ಲ. ಈ ಕೇಸ್‌ನಲ್ಲಿ ಸುಪ್ರೀಂ ಕೋರ್ಟ್‌ಗೆ ಹೋಗಿಬಂದಮೇಲೂ ಕೂಡ ನಾವು ಇಲ್ಲಿ ಬಂದು ಮತ್ತೆ ಅವರಿಗೆ ಜಾಗ ಕೊಡುವುದಾದರೆ ಆ 100 ಜನಕ್ಕೆ ನಿಮಗೂ ಬನ್ನಿ ಎಂದು ಹೇಳುವುದಾದರೆ ಕೋರ್ಟ್ ಏಕೆ ಇಟ್ಟುಕೊಳ್ಳಬೇಕು?

ಶ್ರೀ ಬಿ.ಎಸ್. ಯಡಿಯೂರಪ್ಪ : ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ನಮ್ಮ ಸರ್ಕಾರವೇ ವಾದ ಮಾಡಿದೆ. ನಾವು ಅಕ್ವೈರ್ ಮಾಡಿಕೊಂಡಿರತಕ್ಕದ್ದು ಯಾವ ರೀತಿ ಸರಿಯಿದೆ, ಮೋಹನ್ ಮೆಕೇನ್ಸ್‌ನವರಿಗೆ ಯಾವ ರೀತಿಯು ಜಮೀನನ್ನು ಕೊಡಬಾರದೆಂಬ ಬಗ್ಗೆ ವಕೀಲರನ್ನು ಇಟ್ಟು ಅವರಿಗೆ ಲಕ್ಷಾಂತರ ರೂಪಾಯಿ ಫೀಸನ್ನು ಕೊಟ್ಟಿದ್ದಾರೆಂಬುದನ್ನೂ ಕೂಡ ಈ ಸದನದಲ್ಲಿ ಹೇಳಬೇಕಾಗುತ್ತದೆ. ಸರ್ಕಾರ ವಾದ ಮಾಡಿ ಅಕ್ವೈರ್ ಮಾಡಿಕೊಂಡಿರತಕ್ಕದ್ದು ಸರಿ ಇದೆ ಎಂದು ಹೇಳಿ ಇಂಡಸ್ಟ್ರೀಸ್ ಪರ್ಪಸ್ ಅದು ಇಂಡಸ್ಟ್ರಯಲ್ ಏರಿಯ ಇವರು ಮಾಡಿರುವುದು ಸರಿಯಿಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳೇ ಈ ಸದನದಲ್ಲಿ ಹೇಳಿಕೆಯನ್ನು ಕೊಡತಕ್ಕಂಥ ವಿಚಿತ್ರ ಪರಿಸ್ಥಿತಿಗೆ ಅಧಿಕಾರಿಗಳನ್ನು ನೂಕಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಜಾಗೃತರಾಗಬೇಕಾಗಿದೆ. ಇದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ.

ಶ್ರೀ ಕೆ. ಲಕ್ಕಪ್ಪ : ತಾವು ಈ ಬಗ್ಗೆ ಕಾನೂನು ವಗೈರೆಯನ್ನು ನಿರೂಪಿಸಿ ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆಯನ್ನು ವಿಧಿಸಬೇಕೆಂಬ ವಾದವನ್ನು ನಾನು ಸಭೆಯ ಮುಂದೆ ಮಂಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್.ಜಿ. ನಾಯಕ್ : ಮಾನ್ಯ ಅಧ್ಯಕ್ಷರೆ, ಮೊದಲು ರಾತ್ರಿ ಹೊತ್ತು ದರೋಡೆ ಆಗುತ್ತಿತ್ತು. ಈಗ ಹಗಲು ಹೊತ್ತೇ ದರೋಡೆಯಾಗುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಷ್ಟು ಹೊತ್ತು ಎಲ್ಲರೂ ಮಾತನಾಡಿದರು. ಆದರೆ ಈಗ ತಾವು ಒಳ್ಳೆಯ ಮುತ್ತಿನಂಥ ಮಾತನಾಡಿದಿರಿ.

+ ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ಕೆ. ಹೆಚ್. ರಂಗನಾಥ್‌ರವರು, ಮಾನ್ಯ ಲಕ್ಕಪ್ಪನವರು ಬಹಳ ವಿವರವಾಗಿ

ವಿಷಯಗಳನ್ನು ಹೇಳಿದ್ದಾರೆ. ಇಲ್ಲಿ ಪ್ರಸ್ತಾಪವಾಗಿರತಕ್ಕದ್ದು ಸರ್ವೆ ನಂ. 174, 175, ಮಹಾಲಕ್ಷ್ಮಿ ಲೇ ಔಟ್ ಅಂದರೆ ಹಿಂದಿನ ಕ್ಯಾತಮಾರನಹಳ್ಳಿ ವಿಚಾರವಾಗಿ ಹೇಳಿದ್ದಾರೆ. ಮಾನ್ಯ ರಂಗನಾಥ್‌ರವರು ಹೇಳಿರತಕ್ಕದ್ದು ಅವರು ಏನು ಫ್ಯಾಕ್ಟನ್ನು ನೆರೇಟ್ ಮಾಡಿದ್ದಾರೆ. ಅದು ಅಷ್ಟೂ ಕೂಡ ನಿಜ. ನಾನು ಇದನ್ನು ಅಲ್ಲಗಳೆಯುತ್ತಿಲ್ಲ. 1975ರಲ್ಲಿ ಅಕ್ವಿಸಿಷನ್ ಪ್ರೊಸೀಡಿಂಗ್ಸ್, ಪ್ರಾರಂಭವಾಯಿತು. 1977ರಲ್ಲಿ ಲೇ ಔಟ್ ಪ್ರಾರಂಭವಾಯಿತು. ಅಲ್ಲಿ 198 ಸೈಟುಗಳನ್ನು ಮಾಡಿರತಕ್ಕದ್ದು, ಅದರಲ್ಲಿ 170 ಸೈಟನ್ನು ವಿಲೇವಾರಿ ಮಾಡಿರತಕ್ಕದ್ದು ಇತ್ಯಾದಿ ಇತ್ಯಾದಿ ವಿವರಗಳು, ಅನಂತರ ಅದು ಸುಪ್ರೀಂ ಕೋರ್ಟ್‌ನ ವರೆಗೆ ಹೋಗಿರತಕ್ಕದ್ದು, ಅಲ್ಲಿ ಜಡ್ಜ್‌ಮೆಂಟ್ ಆಗಿರತಕ್ಕ ವಿಚಾರ, ಅದರ ಬಗ್ಗೆ ಇಲ್ಲಿ ಮತ್ತೊಂದು ಅಭಿಪ್ರಾಯವನ್ನು ಇಟ್ಟು ನಾನು ಮಾತನಾಡುತ್ತಿಲ್ಲ. ಅದು ನಿಜವಾದ ಅಂಶ, ಮತ್ತು ಜಡ್ಜ್‌ಮೆಂಟ್ ಕೂಡ ಇರತಕ್ಕದ್ದು 29 ಲಕ್ಷ ರೂ. ಕಾಂಪೆನ್‌ಸೇಷನ್ ವಿಚಾರದಲ್ಲಿ ಕೂಡ ಏನು ಹೇಳಿದ್ದಾರೆ ಅದೂ ಕೂಡ ನಿಜ. ಅನಂತರ ಬಿ.ಡಿ.ಎ. ಆಕ್ಟ್ ಪ್ರಕಾರ ಅದನ್ನು ಅಕ್ವೈರ್ ಮಾಡತಕ್ಕ ಪ್ರಸಂಗ ನಡೆಸಿದಮೇಲೆ ಇದೆಲ್ಲಾ ಉದ್ದಕ್ಕೂ ನಡೆದುಕೊಂಡು ಬಂದಿದೆ. ಅದರಲ್ಲಿ ಮಾನ್ಯ ರಾಜ್ಯಪಾಲರ ಆಡಳಿತ ಇದ್ದಾಗ ಅವರು ಅರ್ಜಿ ಕೊಟ್ಟಿದ್ದಾರೆ. ಅದಾದಮೇಲೆ 1990ರಲ್ಲಿ ಅದು ಬಿ.ಡಿ.ಎ. ಆಕ್ಟನ್ ಸೆಕ್ಷನ್ 63ರ ಪ್ರಕಾರ ವ್ಯವಹಾರ ಬೇರೆ ರೀತಿಯಲ್ಲಿ ನಡೆದಿದೆ ಎಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ರೆಕಾರ್ಡ್ಸನ್ನು ತರಿಸಿ ನೋಡಿದರೆ ಗೊತ್ತಾಗುತ್ತದೆಂದು ಹೇಳಿದ್ದಾರೆ. ಇಲ್ಲಿ ಅಧಿಕಾರದ ದುರುಪಯೋಗ ಆಗಿದೆ ಎಂದು ಹೇಳಿದ್ದಾರೆ. ಇಲ್ಲಿ ಡಿಪಾರಿಟಿ ಪ್ರಶ್ನೆ ಕೂಡ ಅಧಿಕವಾಗಿದೆ ಎಂದು ಹೇಳಿದ್ದಾರೆ. ಅವರೇ ಸ್ವತಃ ವಕೀಲರಾಗಿರುವುದರಿಂದ ಇದರಲ್ಲಿ ಲೀಗಲ್ ವಿಚಾರ ಕೂಡ ಈ ರೀತಿ ಬರುತ್ತದೆಂದು ಅವರು ಅನಲೈಸ್ ಮಾಡಿದ್ದಾರೆ. ನಾನು ಫ್ಯಾಕ್ಟ್ಸ್ ಬಗ್ಗೆ ಹೆಚ್ಚಿಗೆ ಹೋಗುತ್ತಿಲ್ಲ, ಏಕೆಂದರೆ ವಾಸ್ತವಾಂಶ ಇರುವುದರಿಂದ ಮತ್ತೊಂದು ಅಭಿಪ್ರಾಯವನ್ನು ನಾನು ಕೊಡತಕ್ಕದ್ದು ಸರಿಯಲ್ಲ. ಇಲ್ಲಿ ಏನಾಗಿದೆ ಎಂದರೆ 19-5-78ರಲ್ಲಿ ಸ್ವಾಧೀನ ಕೂಡ ಕೊಟ್ಟಿದ್ದಾರೆ. ಸೈಟುಗಳನ್ನು ಮಾಡಿದ್ದಾರೆ. ಇಲ್ಲಿ ಕರ್ನಾಟಕ ಕಂಟ್ರಿ ಅಂಡ್ ಟೌನ್ ಆಕ್ಟ್ ಪ್ರಕಾರ ಇದು ಯಾವ ಉದ್ದೇಶಕ್ಕಾಗಿ ಆ ಜಾಗ ಇರುತ್ತದೆ, ಆ ಉದ್ದೇಶಕ್ಕೆ ಮಾತ್ರ ಅದನ್ನು ಅಕ್ವೈರ್ ಮಾಡಿಕೊಳ್ಳಬೇಕು, ಬೇರೆ ಉದ್ದೇಶಕ್ಕೆ ಅಕ್ವೈರ್ ಮಾಡಿಕೊಳ್ಳಬಾರದೆಂದು ಇದೆ. ಅದರ ಪ್ರಕಾರ ಪ್ರೊಸೀಡಿಂಗ್ಸ್ ತೆಗೆದುಕೊಂಡಿದ್ದೇವೆ ಹೇಳಿದ್ದಾರೆ. ಇದು ಇಂಡಸ್ಟ್ರಿಯಲ್ ಪರ್ಪಸ್‌ಗೆ ಇರತಕ್ಕದ್ದು. ಇವತ್ತು ಇದು ಅಕ್ವಿಸಿಷನ್ ಆಗಬೇಕಾದರೆ ಇಂಡಸ್ಟ್ರಿಯಲ್ ಪರ್ಪಸ್‌ಗೇ ಅಕ್ವಿಸಿಷನ್ ಆಗಬೇಕು. ಹೌಸ್ ಸೈಟ್ಸ್‌ಗೆ ಅಲ್ಲ ಎನ್ನತಕ್ಕ ವಿಚಾರವನ್ನು ಇಲ್ಲಿ ಅಡಕ ಮಾಡಿ ಅದನ್ನು ಆಧಾರವಾಗಿಟ್ಟು ಮುಂದಿನ ಕ್ರಮವನ್ನು ಜರುಗಿಸಿದ್ದಾರೆಂಬ ವಿಚಾರ ಇಲ್ಲಿ ಪ್ರಸ್ತಾಪವಾಗಿದೆ.

6.30 ಪಿ.ಎಂ

ಮಾನ್ಯ ಸದಸ್ಯರಾದ ರಂಗನಾಥ್‌ರವರು ಹೇಳಿರತಕ್ಕಂಥದ್ದು, ಇಂತಹ ಸಂದರ್ಭಗಳು ಬಂದಾಗ ಬೇರೆ ರಾಜ್ಯದ ಸ್ಪೀಕರ್‌ರವರು ತಮ್ಮ ಅಧಿಕಾರವನ್ನು ಯಾವ ರೀತಿ ಚಲಾವಣೆ ಮಾಡಿದ್ದಾರೆಂಬ ಬಗ್ಗೆ ಕೂಡ ಹೇಳಿದ್ದಾರೆ. ಇಲ್ಲಿ ಯಾವ ಅಲಾಟೀಸ್ ಇದ್ದಾರೆ ಅವರ ಬಗ್ಗೆ ಹೇಳಬೇಕೆಂದರೆ, ಸೈಟ್ಸ್ ಒಂದು ಸಲ ಅಕ್ವಯರ್ ಆದಮೇಲೆ, ಅದರಲ್ಲಿ ಲೈಔಟ್ ಆದಮೇಲೆ, ಅನಂತರ ಇಂತಿಂಥ ಸೈಟ್ಸ್ ಎನ್ನತಕ್ಕಂಥ ವಿಚಾರ ಹೇಳಿದ ಮೇಲೆ ಅವರು ಹಣವನ್ನೂ ಕೂಡ ಕಟ್ಟಿರುತ್ತಾರೆ.

29 ಲಕ್ಷ ರೂಪಾಯಿ ಅದರ ಕಾಂಪೆನ್‌ಸೇಷನ್ ಎಂದು ಹೇಳಿ ಕೊಟ್ಟಾಗಿದೆ ಎಂದರೆ ಸಹಜವಾಗಿ ಪಾವತಿ ಕೂಡ ಆ ಅಲಾಟೀಸ್ ಕೂಡ ಮಾಡಿರುತ್ತಾರೆ ಎನ್ನುವ ವಿಚಾರ ಅದು ನಮಗೆ ಅರ್ಥವಾಗುತ್ತದೆ. ಅದು ನಾನು ಒಪ್ಪತಕ್ಕಂಥ ಮಾತು. ಆದರೆ ಕಾನೂನು ಪ್ರಕಾರ ಬೇರೆ ಕಾಂಟ್ರವಿಸ್ ಮಾಡುತ್ತಿದೆ ಎನ್ನುವ ಕಾರಣದಿಂದ ಇದರ ಕಾರ್ಯಕ್ರಮ ಪ್ರಾರಂಭವಾಗಿದೆ. ಇದರಲ್ಲಿ ಅಲಾಟೀಸ್ ಪರವಾಗಿ ಸಹಾಯ ಮಾಡಬೇಕೆನ್ನುವ ಅಭಿಪ್ರಾಯವನ್ನು ಇಟ್ಟು ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಅರ್ಥವಿದೆ. ನಾನು ಇಲ್ಲವೆನ್ನತಕ್ಕಂಥ ಮಾತನ್ನು ಹೇಳುತ್ತಿಲ್ಲ, ಏತಕ್ಕೆಂದರೆ ಹಣ ಕೊಟ್ಟು ಅಲಾಟ್‌ಆಗಿ ಇಷ್ಟೆಲ್ಲ್ ಆಗಿ ಸುಪ್ರೀಮ್‌ಕೋರ್ಟಿನವರೆಗೆ ಹೋಗಿಬಂದಮೇಲೆ ಇದು ಹಾಗೆಯೇ ಅವರನ್ನು ಸುಮ್ಮನೆ ಕೈ ಬಿಟ್ಟರೆ ಅವರ ಗತಿ ಏನಾಗಬೇಕು. ಇಷ್ಟು ವರ್ಷಗಳವರೆಗೆ ನ್ಯಾಯಾಲಯದಲ್ಲಿ ಓಡಾಡಿದ್ದಾರೆ ಎನ್ನುವ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಕಳೆದ ಸಾರಿ ಈ ವಿಚಾರವನ್ನು ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದ್ದಾರೆ. ನಾನು ಅಂದು ಹೇಳಬೇಕಾದರೆ ಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ ಅದು ಎಂದು ಹೇಳಿದೆ. ಆದರೆ ಅದು ಬೇರೆ ಕೇಸ್ ಎನ್ನತಕ್ಕ ಮಾತನಾಡಿ, ಕೊನೆಗೆ ನಾನು ಹೇಳಿಕೆಯನ್ನು ಕೂಡ ಮಾಡಿದ್ದೇನೆ. ನಾನು ಏನು ಆ ಹೇಳಿಕೆಯನ್ನು ಇಲ್ಲಿ ಕೊಟ್ಟಿದ್ದೇನೆ, ಅದೇ ಹೇಳಿಕೆಯನ್ನು ಮತ್ತೆ ರೀ ಇಟರೇಟ್ ಮಾಡುತ್ತೇನೆ. ಅದಕ್ಕೆ ಬೇರೆ ಒಂದೇ ಒಂದು ವಿಚಾರವನ್ನು ಸೇರಿಸಿ ಹೇಳುತ್ತಿದ್ದೇನೆಂದರೆ ಅವರು ಏನು ಸೆಕ್ಷನ್ 63ರ ಪ್ರಕಾರ ಅವರು ರಿವಿಷನ್ ಪವರ್ಸ್ ಇತ್ಯಾದಿ ಎನ್ನತಕ್ಕಂಥ ಉಪಯೋಗ ಮಾಡಿ ಸ್ಟೇ ಕೊಡತಕ್ಕಂಥ ಕಾರ್ಯ ಕ್ರಮ ಅಥವಾ ಮತ್ತೊಂದು ಈ ರೀತಿ ಇದೆ. ಏತಕ್ಕೆಂದರೆ ಹೌಸ್ ಸೈಟ್ಸ್‌ಗೆ ಬರುವುದಿಲ್ಲ, ಅದು ಇಂಡಸ್ಟ್ರಿಯಲ್ ಪರ್ಪಸ್‌ಗೆ ಇರತಕ್ಕಂಥದ್ದು ವಿಚಾರ ಏನಿದೆ ಈ ವಿಚಾರದಲ್ಲಿ ನಾವು ಎಷ್ಟೇ ವಿಚಾರ ಮಾಡಿದರೂ ಕೂಡ ಈಗ ಕರ್ನಾಟಕ ಹೈಕೋರ್ಟಿನಲ್ಲಿ ಕೇಸ್‌ಗಳು ಪೆಂಡಿಂಗ್ ಇದಾವೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಈ ಒಂದು ವಿಷಯ ಇಂಡಸ್ಟ್ರಿಯಲ್ ಪರ್ಪಸ್‌ಗೆ ಎಂದು 1960ರಲ್ಲಿ ಮಾಡಿದ್ದಾರೆ. ಇದು ಮಾಡುವುದಕ್ಕೆ ಬರುವುದಿಲ್ಲವೆನ್ನುವ ವಿಚಾರವನ್ನು ಮಾತ್ರ ತೆಗೆದುಕೊಂಡು ಅದನ್ನು ಈ ರಿವಿಷನ್ ಪಿಟಿಷನ್‌ನಲ್ಲಿ ಉಪಯೋಗ ಮಾಡಿಕೊಂಡು ಸ್ವಾಧೀನಕ್ಕೆ ತೆಗೆದುಕೊಂಡಿಲ್ಲವೆನ್ನುವ ಮಾತನ್ನು ಉಪಯೋಗ ಮಾಡಿಕೊಂಡು ಅವರು ಈ ನಿರ್ಣಯಕ್ಕೆ ಬಂದಿರತಕ್ಕಂಥದ್ದು. ಆದರೆ ಹೈಕೋರ್ಟಿನಲ್ಲಿ ಮುರಳಿಧರರಾವ್ ಅವರು ಮೊದಲೇ ಒಂದು ರಿವಿಷನ್ ಪಿಟಿಷನ್ ಒಂದು ಅಪೀಲ್ ಹಾಕಿದ್ದಾರೆ. ಈ ಅಕ್ವಿಜಿಷನ್ ಆದಮೇಲೆ ನಮ್ಮ ಸ್ವಾಧೀನಕ್ಕೆ ಕೊಡಬೇಕೆಂದು, ಅದರಲ್ಲಿ ಬಿ.ಡಿ.ಎ. ಮತ್ತೆ ಈ ಅರ್ಜಿದಾರರು ಇದ್ದಾರೆ ಅಂದರೆ ಮಾಲೀಕರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಸಿ.ಪಿ.ಡಿ. ಪ್ರಕಾರ ಬರುವುದಿಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ. ಇದನ್ನೆಲ್ಲಾ ಹೈಕೋರ್ಟ್ ವಿಚಾರ ಮಾಡಿದೆ. A considered judgement is written by the judge. ಮತ್ತೆ ಅವರಿಗೆ 27ನೇ ಡಿಸೆಂಬರ್‌ನಲ್ಲಿ ಮಾಡಿರತಕ್ಕಂಥ ಆರ್ಡರ್‌ನಲ್ಲಿ ಈ ಮಾತನ್ನು ಉಲ್ಲೇಖ ಮಾಡಿಕೊಂಡು ಸ್ವಾಧೀನ ಇಲ್ಲ ಎನ್ನುವ ಮಾತನ್ನು ಉಲ್ಲೇಖ ಮಾಡಿಕೊಂಡು ಗೌವರ್ನರ್ ಕಾಲದಲ್ಲಿ ನಿರ್ಣಯ ಮಾಡುವಾಗ ಅಡ್ವೈಸರ್ ಅಲ್ಲಿ ಏನೋ ಒಂದು ಮಾತು ಬಂದಿದ್ದನ್ನು ಸ್ವಾಧೀನಕ್ಕೆ ತೆಗೆದುಕೊಂಡಿಲ್ಲ ಎನ್ನುವ

ಮಾತನ್ನು ಉಪಯೋಗ ಮಾಡಿಕೊಂಡು ಈ ರಿವಿಷನ್ ಪಿಟಿಷನ್ ಬಗ್ಗೆ ಜಡ್ಜ್‌ಮೆಂಟ್ ಬರೆದಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಇಲ್ಲಿ ಪ್ರಸ್ತಾಪ ಮಾಡುವುದರಿಂದ ಒಂದು ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ. ಇವತ್ತು ಹೈಕೋರ್ಟ್ ಮತ್ತು ಸುಪ್ರೀಮ್‌ಕೋರ್ಟ್ ಸರ್ಕಾರದ ಪರವಾಗಿ ಬಿ.ಡಿ.ಎ. ಪರವಾಗಿ ಸೈಟ್ಸ್ ಸಿಕ್ಕಿಂದಂತಹ ಜನರಪರವಾಗಿ ತೀರ್ಪನ್ನು ಕೊಟ್ಟಿದ್ದಾರೆ. ಹೀಗಿರಬೇಕಾದರೆ ಹೈಕೋರ್ಟ್, ಸುಪ್ರೀಮ್‌ಕೋರ್ಟ್ ಸರ್ಕಾರದ ರಕ್ಷಣೆಗೆ ಬಿ.ಡಿ.ಎ. ರಕ್ಷಣೆಗೆ ಆ ಒಂದು ಸೈಟ್ಸ್‌ನ್ನು ಪಡೆದಂಥ ವ್ಯಕ್ತಿಗಳ ರಕ್ಷಣೆಗೆ ಬಂದಾಗ ನಿಮ್ಮ ಅಧಿಕಾರಿ ಇವತ್ತು ಮೋಹನ್ ಮೆಕನ್ಸ್ ಪರವಾಗಿ ತೀರ್ಪನ್ನು ಮಾಡುವಂಥ ಸಂದರ್ಭ ಏನಿತ್ತು. ಇದು ಒಂದು ಇನ್ನು ಎರಡನೆಯದು ತಾವು ಹೈಕೋರ್ಟಿನ ಆರ್ಡರನ್ನು ನೋಡಿ, ಹೈಕೋರ್ಟ್ ಆರ್ಡರ್ ದಿನಾಂಕ 30-7-86 Page 3 ರಲ್ಲಿ In its order Hon'ble Court upheld acquisition and ordered that some of the occupants have not been evicted, but their possession cannot be in their own right they are liable to be evicted. ಇದು ಹೈಕೋರ್ಟ್ ಡೈರೆಕ್ಷನ್ ಇದನ್ನು ಮೀರಿ ನಮ್ಮ ಹೆಚ್.ಯು.ಡಿ ಅಧಿಕಾರಿ ಒನ್ ಸೈಡೆಡ್ ಆಗಿ ಆ ಪಾರ್ಟಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಮಾಡಿರುವಂಥದ್ದು ಇದು ಎಲ್ಲರಿಗೂ ಗೊತ್ತಿರುವಂಥ ಸಂಗತಿ. ಮತ್ತೆ ಕೋರ್ಟಿನಲ್ಲಿ ಇಲ್ಲ. ಕೋರ್ಟಿನಲ್ಲಿ ಏನಿದೆ, ಯಾರಿಗೆ ಸೈಟ್ಸ್ ಸಿಕ್ಕಿದೆ ಅವರು ಹೋಗಿದ್ದಾರೆ. ಈ ಪಾರ್ಟಿ ಹೋಗಿದ್ದಾರೆ. ಅದಕ್ಕೆ ನಿಮ್ಮ ಅಧಿಕಾರಿಗಳು ಕಾರಣಕರ್ತರಾಗಿದ್ದಾರೆ. ಇಂಥ ಸಂದರ್ಭದಲ್ಲಿ ಎವಿಕ್ಟ್‌ಮಾಡಿ ಓಡಿಸಿ ಸೈಟ್ಸ್ ಸಿಕ್ಕಿದಂಥ ಜನರಿಗೆ ಅನುಕೂಲ ಮಾಡಿಕೊಡುವ ಬದಲಾಗಿ ನಿಮ್ಮ ಅಧಿಕಾರಿಗಳು ಸಂಪೂರ್ಣವಾಗಿ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಅದಕ್ಕೆ ರಕ್ಷಣೆ ಇವತ್ತು ಎಂದು ಎಲ್ಲರಿಗೂ ಗೊತ್ತಿರುವಂಥ ಸಂಗತಿ .ತಾವು ಇವತ್ತು ನೇರವಾಗಿ ಇಲ್ಲಿ ನಿಮ್ಮ ಅಧಿಕಾರಿ ಮಾಡಿರುವಂಥ ಆರ್ಡರ್ ತಪ್ಪಿದೆ ಅದನ್ನು ವಿತ್‌ಡ್ರಾ ಮಾಡಿಕೊಳ್ಳುತ್ತಿದ್ದೇನೆ. ಕೋರ್ಟಿನಲ್ಲಿ ಆ ಸೈಟ್ಸ್ ಪಡೆದಿರುವವರ ಪರವಾಗಿ ವಾದ ಮಾಡುತ್ತಿದ್ದೇವೆಂದು ಹೇಳಬೇಕಾಗಿದೆ. ಏತಕ್ಕೆಂದರೆ ಅದೇ ಸ್ಥಳದಲ್ಲಿ ಯಾವುದು ಇಂಡಸ್ಟ್ರಿಯಲ್ ಪರ್ಪಸ್‌ಗೆ ಜಾಗ ಇದೆ. ಅದು ಬಿಟ್ಟು ಬೇರೆ ಕಡೆ ಜಮೀನು ಸ್ವಾಧೀನ ಮಾಡಿಕೊಂಡು ಅದನ್ನು ಸೈಟ್ಸ್ ಎಂದು ಮಾಡಿ ಹಂಚಿದ್ದೀರಿ. ಅದೇ ಪ್ಲೇಸ್‌ನಲ್ಲಿ, ಆ ರೀತಿ ನೂರಾರು ಎಕರೆ ಕಳೆದ ನಾಲ್ಕಾರು ವರ್ಷದಲ್ಲಿ ಇಂಡಸ್ಟ್ರಿಯಲ್ ಪರ್ಪಸ್‌ಗೆ ತೆಗೆದುಕೊಂಡ ಜಾಗವನ್ನು ಅಕ್ವಯರ್ ಮಾಡಿಕೊಂಡು ಸೈಟ್ಸ್ ಮಾಡಿ ಹಂಚಿದ್ದೀರಿ. ನೂರಾರು ಉದಾಹರಣೆಗಳಿವೆ. ಇದನ್ನು ಒಂದನ್ನು ಒಪ್ಪಿಕೊಂಡರೆ ಅದೇ ರೀತಿಯಲ್ಲಿ ನೂರಾರು ಜನರಿಗೆ ಇಂಡಸ್ಟ್ರಿಯಲ್ ಪರ್ಪಸ್‌ಗೆ ಎಂದು ತೆಗೆದುಕೊಂಡ ಜಾಗವನ್ನು ಅಕ್ವಯರ್ ಮಾಡಿಕೊಂಡಿದ್ದೀರಿ, ಸೈಟ್ಸ್ ಕೊಡುವುದಕ್ಕೋಸ್ಕರ, ಅದೆಲ್ಲವನ್ನು ವಾಪಸ್ ಕೊಡುವಂಥ ಒಂದು ತಾತ್ವಿಕ ವಿಚಾರಕ್ಕೆ ನೀವ ಬಂದಂತಾಗುತ್ತದೆ. ಇದು ಸರಿ ಹೋಗಲಿಕ್ಕೆ ಇಲ್ಲ.

ಶ್ರೀ ಎಸ್. ಬಂಗಾರಪ್ಪ : ನಾನು ಅಲ್ಲಿರತಕ್ಕ ವಾಸ್ತವಾಂಶಗಳನ್ನು ಸದನದ ಮುಂದಿಡುವುದಕ್ಕೆ ಸಾಧ್ಯವಾಗುತ್ತಿದೆ. ಈಗ ಅಲ್ಲಿರತಕ್ಕ ಒಬ್ಬ ಅಧಿಕಾರಿ ಟೌನ್ ಪ್ಲಾನಿಂಗ್ ಅಕ್ಟ್ ಇರಬಹುದು, ಬಿಡಿಎ. ಅಕ್ಟ್ ಇರಬಹುದು, ಅಲ್ಲಿ ಏನೂ ಅಧಿಕಾರ ಇಲ್ಲದೆ ಅಧಿಕಾರ ದುರುಪಯೋಗಪಡಿಸಿದ್ದರೆ ಅಂಥ ಅಧಿಕಾರಿಗಳ ಮೇಲೆ

ಕ್ರಮ ತೆಗೆದುಕೊಳ್ಳತಕ್ಕ ಹಕ್ಕು, ಶಕ್ತಿ ಸರ್ಕಾರಕ್ಕೆ ಇದ್ದೇ ಇದೆ. ಆ ಮಾತನ್ನು ಮೂಲಭೂತವಾಗಿ ಒಪ್ಪುತ್ತೇನೆ. ಇದರಲ್ಲಿ ಏನಾಗಿದೆ ಎಂದರೆ, ಅವರು ಕೋರ್ಟಿಗೆ ಹೋಗದೆ ಇದ್ದರೆ ನಾನು ರೆಕಾರ್ಡ್ ತರಿಸಿ ನೋಡಿ ಮಾಡಬಹುದಿತ್ತು. ಅದನ್ನೇ ನಾನು ನೋಡಿದೆ. ಈ ಬಗ್ಗೆ ಮಾನ್ಯ ಸದಸ್ಯರು ವಿಷಯವನ್ನು ಕಳುಹಿಸಿದ ತಕ್ಷಣ ಅಮೂಲಾಗ್ರವಾಗಿ ನೋಡಿದ ಮೇಲೆ ತಮ್ಮ ಗಮನಕ್ಕೆ ತರುವುದು ಇಷ್ಟೆ, ಈ ಸೈಟ್ಸ್ ಅಲಾಟೀಸ್ ಏನಿದ್ದಾರೆ, ಅವರು ಹೈಕೋರ್ಟ್‌ನಲ್ಲಿ ರಿಟ್ ಪಿಟಿಷನ್ ಹಾಕಿದ್ದಾರೆ. ರಿಟ್ ಪಿಟಿಷನ್ ನಂ.5494/91 ರಿಂದ 5491 ತಾರೀಖು 1-3-91. And the stay is not granted. No stay was granted by the High Court as requested for. It is subject to verification. I have no objection to verify that. ಎಂಬುದು ನನ್ನ ಗಮನಕ್ಕೆ ಬಂದಿರತಕ್ಕದ್ದು. ಇದನ್ನು ತಾವು ವೆರಿಫೈ ಮಾಡಬೇಕೆಂದು ಇದ್ದರೆ ಅದಕ್ಕೆ ನನ್ನ ಅಭ್ಯಂತರವೇನು ಇಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಸರ್ಕಾರವೇ ತೀರ್ಮಾನ ಕೊಡುವುದಾದರೆ ಕೇಸನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ. ತಾವು ಆ ಫೈಲನ್ನು ತರಿಸಿಕೊಂಡು ತೀರ್ಮಾನ ಕೊಡುವುದಾರೆ ಅವರು ಕೇಸನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ.

SRI S. BANGARAPPA : Inspite of the fact that the matters are pending before the court of law and the questions and matters are pending before the High Court. ಇಷ್ಟಾದರೂ ತಮ್ಮ ಸಲಹೆ ಪ್ರಕಾರ, ಸರ್ಕಾರವೇ ತೀರ್ಮಾನ ತೆಗೆದುಕೊಂಡರೆ ರಿಟ್ ಪಿಟಿಷನ್ ಅನ್ನು ವಿತ್‌ಡ್ರಾ ಮಾಡುತ್ತಾರೆಂದು ಒಂದು ಸಲಹೆ ಈಗ ಕೇಸು ಹೇಗೂ ಕೋರ್ಟಿನಲ್ಲಿ ಇದೆ. As far as the action taken , initiated under Section 63 is concerned, ಹೇಗಿದ್ದರೂ ಹೈಕೋರ್ಟ್‌ನವರು ತೀರ್ಮಾನ ಮಾಡತಕ್ಕ ಸಂದರ್ಭ ಇರುವುದರಿಂದ ಅವರು ಅಲ್ಲೇ ಮಾಡಲಿ, let us wait for the outcome of those Writ petitions now pending before the High Court. ಎಂಬುದು ಸಹ ಬರುತ್ತಿದೆ. ಆ ಸಲಹೆಯನ್ನು ಕೊಟ್ಟಿದ್ದೀರಿ. ನೀವೇ ಅಲಾಟೀಸ್‌ಗೆ ಅನ್ಯಾಯವಾಗಿದೆ ಎಂದು ಹೇಳಿದಿರಿ. ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಅರ್ಥವಿದೆ. I Could see the point. ಏಕೆಂದರೆ ಇಷ್ಟು ವರ್ಷಗಳು ಕಳೆದ ಮೇಲೆ ಹಣ ಹಾಕಿ ಸುಪ್ರೀಂ ಕೋರ್ಟಿಗೆ ಹೋಗಿಬಂದಮೇಲೆ ಮತ್ತು ಹೈಕೋರ್ಟಿಗೆ ಹೋಗಿರುವುದರಿಂದ ಪಾರ್ಟಿಗಳಿಗೆ ಅನ್ಯಾಯವಾಗುತ್ತಿದೆ ಎಂದು ಹೇಳುವುದರಲ್ಲಿ ಅರ್ಥವಿದೆ. As regards writ petitions details, I have not been able to go through the averments made in those writ petitions pending before the High Court. ನಾನು ಅದನ್ನು ನೋಡಿ ಹಾಗೇನಾದರೂ ಸಾಧ್ಯವಿದ್ದರೆ ತಮ್ಮ ಸಲಹೆ ಒಳ್ಳೆಯದು. ಲೀಗಲ್ ಆಗಿ ಮಾಡುವುದಕ್ಕೆ ಸಾಧ್ಯತೆ ಕಂಡುಬಂದರೆ ಅದನ್ನು ಮಾಡುವುದಕ್ಕೆ ವಿಚಾರ ಮಾಡುತ್ತೇನೆ. ಇಲ್ಲವೇ ಹೈಕೋರ್ಟಿನಲ್ಲೇ ತೀರ್ಮಾನವಾಗಲಿ ಎಂಬ ವಿಚಾರಕ್ಕೆ ಬಂದರೆ, I am sorry, ನಾನು ಏನು ಮಾಡುವುದಕ್ಕೆ ಬರುವುದಿಲ್ಲ, ಏಕೆಂದರೆ, matters are pending before the High Court. ಒಟ್ಟಿನಲ್ಲಿ ಲೀಗಲ್ ಆಗಿ ವಿಚಾರ ಮಾಡಿ ಸರ್ಕಾರದವರು ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗಬಹುದೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಆದರೆ ಪಾರ್ಟಿಗಳಿಗೆ ಹಣ ಕೊಟ್ಟಿರತಕ್ಕದ್ದು, ಏಕೆಂದರೆ ಮೊದಲೇ ಇಂಡಸ್ಟ್ರಿಯಲ್ ಪರ್ಪಸ್‌ಗೆ ಎಂದು ಇದ್ದುದನ್ನು ಅಕ್ವೈರ್ ಮಾಡಿದ್ದರೆ, ಅದು ಬಿಟ್ಟು ಬೇರೆಯಂದಕ್ಕೆ ಏತಕ್ಕೆ ಅಕ್ವೈರ್ ಮಾಡಿದರು ಎಂದು ಅರ್ಥವಾಗುತ್ತಿಲ್ಲ, ಅವಕಾಶ ಇಲ್ಲದಿದ್ದರೂ

ಹೌಸ್ ಸೈಟ್ಸ್ ಏತಕ್ಕೆ ಮಾಡುವುದಕ್ಕೆ ಹೋದರು? ಆದ್ದರಿಂದ ಈ ಬಗ್ಗೆ ಎಲ್ಲಾ ವಿವರಗಳನ್ನು ತರಿಸಿ ಸೂಕ್ತ ಕಾರ್ಯಕ್ರಮ ಹಾಕುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪ್ರಭಾಕರ್ ಎಸ್. ರಾಣೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ, ಇಂಡಸ್ಟ್ರಿಯಲ್ ಪರ್ಪಸ್‌ಗೆ ಅಕ್ವಿಷನ್ ಆದಂತದ್ದನ್ನು ಹೌಸ್ ಸೈಟ್ಸ್‌ಗೆ ಹೇಗೆ ಕೊಟ್ಟರೋ ಎಂಬುದು ತಮಗೆ ಗೊತ್ತಿಲ್ಲವೆಂದು ಹೇಳುತ್ತಿದ್ದಾರೆ. ಎರಡನೆಯದಾಗಿ, ಹಿರಿಯ ಸದಸ್ಯರಾದ ಶ್ರೀ ರಂಗನಾಥ್‌ರವರು ಕೊಟ್ಟ ಸಲಹೆ ಬಗ್ಗೆ ವಿಚಾರ ಮಾಡುತ್ತೇನೆಂದು ಹೇಳಿದ್ದಾರೆ. ಇಲ್ಲಿ ಪ್ರಶ್ನೆ ಉದ್ಭವವಾಗುವುದು ಏನೆಂದರೆ ಅನೇಕ ಮಾನ್ಯ ಸದಸ್ಯರು ಈಗಾಗಲೇ ಹೇಳಿದಂತೆ ಈಗಾಗಲೇ ಹೈಕೋರ್ಟ್ ಈ ಎಲ್ಲಾ ವಿಷಯಗಳನ್ನು ಪರಿಗಣನೆಗೆ ತೆಗೆದುಕೊಂಡು ತನ್ನ ನಿರ್ಣಯ ನೀಡಿದೆ. ಆ ನಿರ್ಣಯದಲ್ಲಿ ಸ್ಪಷ್ಟವಾಗಿ ಹೇಳಿದೆ. ಈ ಮೋಹನ್ ಮೇಕಿನ್ಸ್ ಅವರು ಅಲ್ಲಿ ಟ್ರೆಸ್‌ಪಾಸರ್ಸ್. ಅಷ್ಟೇ ಅಲ್ಲ, ಏನು ಅಲಾಟೀಸ್ ಇದ್ದಾರೆ ಅವರಿಗೆ ಹೌಸ್ ಸೈಟ್ಸ್ ನೀಡಬೇಕೆಂದು ಒಂದು ಆದೇಶವನ್ನು ಕೊಟ್ಟಿದ್ದಾರೆ. ಹೀಗಿರುವಾಗ ಇವತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ ಸ್ಪಷ್ಟವಾದ ಒಂದು ಭರವಸೆಯನ್ನು ಕೊಡಲಿಕ್ಕೆ ಅವಕಾಶ ಇದೆ. ಅವರು ಅದನ್ನು ಉಪಯೋಗಿಸಿಕೊಳ್ಳಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಇಲ್ಲಿ ಹೈಕೋರ್ಟ್‌ನಲ್ಲಿ ಒಂದು ಮಾತನ್ನು ಹೇಳುತ್ತೇನೆ. ಏನೆಂದರೆ, 'The High Court has decided in the year that the BDA has no power under the provisions of the BDA Act and the Rules thereunder to reconvey any land acquired by it. ಎಂದು ಹೀಗಿರುವಾಗ ಎಚ್.ಯು.ಡಿ ಕಾರ್ಯದರ್ಶಿಗಳು ಮಾಡಿದಂಥ ಆಜ್ಞೆ ಏನಿದೆ ಅದು ಕಾನೂನುಬಾಹಿರವಾದ ಆಜ್ಞೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಹಾಗಿರುವಾಗ ಆ ಆಜ್ಞೆಯನ್ನು ರೀಕನ್‌ಸಿಡರ್ ಮಾಡಿ ಸರ್ಕಾರದ ಮಟ್ಟದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಹೈಕೋರ್ಟಿನಲ್ಲಿ ಪುನರಫಿ ಅಲಾಟೀಸ್ ಹೋದದ್ದು ಬೇರೆ ವಿಷಯದಲ್ಲಿ, ಅವರ ಒಂದು ಆಜ್ಞೆ ವಿರುದ್ಧವಾಗಿ ಹೋಗಿದ್ದಾರೆ. ಹಾಗಿರುವಾಗ ಇಲ್ಲಿ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ನಿರ್ಣಯ ಕೈಗೊಳ್ಳುವುದಕ್ಕೆ ಇರುವ ಅಡ್ಡಿ ಏನು? ಆದ್ದರಿಂದ ಮತ್ತೆ ಯಾವುದೇ ಕಾಲಾವಕಾಶ ಕೊಡದೇ ವಿಳಂಬ ಮಾಡದೆ ಇದರ ಬಗ್ಗೆ ಶೀಘ್ರವಾಗಿ ನಿರ್ಣಯ ಕೈಗೊಳ್ಳಲು ಸಾಧ್ಯವೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇನ್ನೊಂದು ಕ್ಲಾರಿಫಿಕೇಶನ್. ಈ ತೀರ್ಮಾನವನ್ನು ಎಚ್.ಯು.ಡಿ. ಸೆಕ್ರೆಟರಿ ಮಾಡುವಂಥ ಸಂದರ್ಭದಲ್ಲಿ ಲೀಗಲ್ ಒಪೀನಿಯನ್ ತೆಗೆದುಕೊಂಡರಾ? ಯಾವುದೇ ಅಧಿಕಾರಿ ಇದ್ದರೂ ತೆಗೆದುಕೊಳ್ಳಬೇಕು. ಅಡ್ವೋಕೇಟ್ ಜನರಲ್ ಅವರ ಅಭಿಪ್ರಾಯ ತೆಗೆದುಕೊಂಡು ಮಾಡಬೇಕಿತ್ತು. ಒಂದೇ ಸಿಟ್ಟಿಂಗ್‌ನಲ್ಲಿ ಇಲ್ಲಿ ತೀರ್ಮಾನ ಮಾಡಿದ್ದಾರೆ. ಇವತ್ತು ಹತ್ತಾರು ಸಿಟ್ಟಿಂಗ್ಸ್‌ಗಳಾದರೂ ಸಣ್ಣ ಪುಟ್ಟ ವಿಷಯ ತೀರ್ಮಾನ ಆಗದೇ ಇರುವ ಸಂದರ್ಭದಲ್ಲಿ ಸುಮಾರು 25-30 ಕೋಟಿ ರೂಪಾಯಿ ಬೆಲೆ ಬಾಳುವಂಥ ಈ ಆಸ್ತಿ ಪರಭಾರೆ ಮಾಡುವಂತಹ ಆಜ್ಞೆ ಮಾಡುವಾಗ ಅಡ್ವೋಕೇಟ್ ಜನರಲ್ ಅವರ ಅಭಿಪ್ರಾಯ ತೆಗೆದುಕೊಂಡಿದ್ದಾರಾ? ಯಾವುದೇ ಅಭಿಪ್ರಾಯ ತೆಗೆದುಕೊಳ್ಳದೆ ಎಚ್.ಯು.ಡಿ. ಸೆಕ್ರೆಟರಿ ಒಂದೇ ಸಿಟಿಂಗ್‌ನಲ್ಲಿ ಈ ತರಹ ತೀರ್ಮಾನ ಮಾಡಿದರೆ

ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರಕ್ಕೆ ಅವರು ಪಾತ್ರರಾಗಿದ್ದಾರೆ ಎಂದು ನೇರವಾಗಿ ಇಲ್ಲಿ ನಾನು ಅಪಾದನೆ ಮಾಡುವುದು ಬಿಟ್ಟರೆ ಬೇರೆ ಮಾರ್ಗ ಇಲ್ಲ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಅಧಿಕಾರಿ ಇದು ಮಾಡಿಲ್ಲ. ಸಂಪೂರ್ಣವಾಗಿ ಇದಕ್ಕೆ ನಿಮ್ಮ ಸರ್ಕಾರದ ಬೆಂಬಲ ಇದೆ. ಆದ್ದರಿಂದ ಎಚ್.ಯು.ಡಿ ಸೆಕ್ರೆಟರಿಯನ್ನು ಬ್ಲೇಮ್ ಮಾಡುವ ಅಗತ್ಯ ಇಲ್ಲ. ಎಚ್.ಯು.ಡಿ. ಸೆಕ್ರೆಟರಿ ಇವತ್ತು ನಿಮ್ಮ ಸರ್ಕಾರದ ಕೈಗೊಂಬೆಯಾಗಿ ವರ್ತನೆ ಮಾಡಿದ್ದಾರೆ. ನೀವು ಹೇಳಿದಂತೆ ಅವನು ಕುಣಿದಿದ್ದಾನೆ. ಇದಕ್ಕೆ ಸಂಪೂರ್ಣವಾದ ಜವಾಬ್ದಾರಿ ಸರ್ಕಾರದ್ದು ಎಂದು ನೇರವಾಗಿ ಅಪಾದನೆಯನ್ನು ಈ ಸಂದರ್ಭದಲ್ಲಿ ನಾನು ಅನಿವಾರ್ಯವಾಗಿ ಮಾಡುತ್ತಿದ್ದೇನೆ ಸಭಾಧ್ಯಕ್ಷರೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ನಾನು ಇಲ್ಲಿಯವರೆಗೆ ಮಾನ್ಯ ಸದಸ್ಯರು ಹೇಳಿದಂಥ With all their good intentions, ಅದು ಸೈಟುದಾರರು ಯಾರು ಹಣ ಕಟ್ಟಿ ತೊಂದರೆ, ಯಾತನೆ ಅನುಭವಿಸಿದ್ದಾರೆ ಅವರಿಗೆ ಸಹಾಯ ಆಗಲಿ ಎಂದು ಸದುದ್ದೇಶದಿಂದ ಹೇಳಿರುವುದನ್ನು ನಾನು ಮನಗಂಡೇ ಸರ್ಕಾರದ ಪರವಾಗಿ ಉತ್ತರ ಕೊಟ್ಟಿದ್ದೇನೆ. ಅದಕ್ಕೆ ಪೂರಕವಾಗಿ ರಾಣೆಯವರು ಈ ಮಾತನ್ನು ಹೇಳಿದ್ದಾರೆ. ಅದು ಹೆಚ್ಚು ಕಡಿಮೆ ಮಾನ್ಯ ರಂಗನಾಥ್ ಅವರು ಹೇಳಿದ್ದನ್ನೇ ಅವರೂ ಕೂಡ ಹೇಳಿದ್ದಾರೆ. ನಾನು ಹೇಳಿದ್ದೇನೆ. ಪುನಃ ಅದನ್ನು ಪ್ರತಿಪಾದನೆ ಮಾಡಬಲ್ಲೆ. ಇದಕ್ಕೆ ಏನು ಅಡ್ಡಿ ಬರುತ್ತದೆ? ಈಗ ಅಲಾಟೀಸ್ ಪರವಾಗಿ ಅಂತಿಮವಾಗಿ ತೀರ್ಮಾನ ಮಾಡುವುದಕ್ಕೆ ಎಂಬ ಬಗ್ಗೆ Pendency of all the Writ Petitions before the High Court ಒಂದೇ ಲೀಗಲ್ ಆಗಿ ಆಗಿರತಕ್ಕದ್ದು. ಸ್ಟೇ ಕೂಡ ಕೊಟ್ಟಿಲ್ಲ. ಸ್ಟೇ ಆರ್ಡರ್ ಕೊಟ್ಟಿದ್ದರೆ ಮತ್ತೊಂದು ಮಾಡಿದ್ದರೆ ಏನಾದರೂ ವಿಚಾರ ಮಾಡಬಹುದಾಗಿತ್ತು. ಸ್ಟೇ ಕೂಡ ಕೊಟ್ಟಿಲ್ಲ ಎಂಬ ವರದಿ ನನ್ನ ಮುಂದೆ ಇದೆ. ಅದಕ್ಕಾಗಿ ನಾನು ಹೇಳಿದೆ. ಅವರಿಗೆ ಅನ್ಯಾಯ ಆಗಿರುವುದನ್ನು ಗಮನದಲ್ಲಿಟ್ಟುಕೊಂಡು ನಾನು ವಿಚಾರ ಮಾಡುತ್ತೇನೆ ಎಂದು ಹೇಳಿದೆ. ಈಗ ಯಡಿಯೂರಪ್ಪನವರ ಮಾತಿನಿಂದ ಇದು ಬೇರೆ ದಾರಿಗೆ ತಿರುಗುತ್ತಿದೆ. ಅವರು ಹೇಳುವುದು ಏನು? ಬರೀ ಎಚ್.ಯು.ಡಿ ಸೆಕ್ರೆಟರಿ ಅಥವಾ ಮತ್ತೊಬ್ಬ ಅಧಿಕಾರಿಗಳ ಬಗ್ಗೆ ಇರುವ ಪ್ರಶ್ನೆ ಇಲ್ಲ. ಬೇರೆಯವರು ಶುಭ ಆಶೀರ್ವಾದ, ಬೆಂಬಲ ಇಲ್ಲದಿದ್ದರೆ ಇದು ಆಗುವುದಿಲ್ಲ ಎಂಬ ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗುತ್ತದೆ ಎಂದು ಹೇಳಿದರು. ಅನಿವಾರ್ಯವಾಗಿ ಹೇಳುವುದಕ್ಕೆ ನಮಗೂ ಕೂಡ ಏನೂ ಬೇರೆ ದಾರಿ ಇಲ್ಲ. ಎಂದು ನೀವು ತಿಳಿದುಕೊಳ್ಳುವುದು ಬೇಡ. ನಾವೂ ಕೂಡ ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಇವತ್ತು ಮಾನ್ಯ ಸದಸ್ಯರು ಹೇಳಿರುವ ಒಂದು ಅಭಿಪ್ರಾಯಕ್ಕೂ ನೀವು ಹೇಳಿರುವ ಫಸ್ಟ್ ಪಾರ್ಟ್ ಇದೆಯಲ್ಲ ಆ ಅಭಿಪ್ರಾಯಕ್ಕೂ ವ್ಯತ್ಯಾಸ ಇದೆ. ಗುಡ್ ಇಂಟೆನ್‌ಷನ್ ಇದ್ದಿದ್ದರೆ ಆಗಲೇ ಹೇಳುತ್ತಾ ಇದ್ದಿರಿ. ಈಗ ನೀವು ಹೇಳುವುದನ್ನು ನೋಡಿದರೆ ಇದನ್ನು ಪೊಲಿಟಿಕಲೈಸ್ ಮಾಡಬೇಕು ಎಂದು ಉದ್ದೇಶ ಇದೆ ಎಂದು ನಿಮ್ಮ ಒಬ್ಬರ ಮಟ್ಟಿಗೆ ಮಾತ್ರ ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಡು ಹೇಳುವುದಕ್ಕೆ ಶುರು ಮಾಡಿದವನು ನಾನು. ಮಾನ್ಯ ರಂಗನಾಥ್ ಅವರು ಇದಕ್ಕೆ ಮಂಗಳ ಹಾಡಿದ್ದಾರೆ. ಇಂದು ಸದನದ ಕೊನೇ ದಿವಸ. ಮೋಹನ್ ಮೇಕಿನ್ಸ್ ಬಗ್ಗೆ ಪ್ರಸ್ತಾಪ ಮಾಡಿದವನು ನಾನು.

ಶ್ರೀ ಎಸ್. ಬಂಗಾರಪ್ಪ : ಒಂದು ಸಾರಿ ವಿಷಯ ಹೇಳಿದಮೇಲೆ ತೆಗೆದುಕೊಳ್ಳುವುದಕ್ಕೂ ರೆಡಿಯಾಗಿರಬೇಕು ಗುಡ್ ಇಂಟೆನ್‌ಷನ್‌ನಿಂದ ಹೇಳುವುದಕ್ಕೂ ಬೇರೆ ರೀತಿ ಪೊಲಿಟಿಕಲೈಸ್ ಮಾಡುವುದಕ್ಕೂ ಬಹಳ ವ್ಯತ್ಯಾಸ ಇದೆ. ಪೊಲಿಟಿಕಲೈಸ್ ಮಾಡಿ ನೀವು ಮಾತನಾಡುತ್ತೇವೆ ಎಂದರೆ ಅದಕ್ಕೆ ತಕ್ಕನಾದ ಉತ್ತರ ನಾನು ಕೊಡಬೇಕಾಗುತ್ತದೆ. ನೀವು ರಿಸೀವಿಂಗ್ ಎಂಡ್‌ಗೆ ರೆಡಿ ಇರಬೇಕಾಗುತ್ತದೆ ಎಂದು ನಾನು ಪದೇ ಪದೇ ಹೇಳುತ್ತಿದ್ದೇನೆ. ಮೊದಲು ಹೇಳಿದ ಅಭಿಪ್ರಾಯವನ್ನು ಒಂದೇ ರೀತಿ ಮಾನ್ಯ ಸದಸ್ಯರು ತಾವು ಹೇಳಿದ್ದೀರಿ. ನಾನು ಅದನ್ನು ನೋಡಿಸುತ್ತೇನೆ. ನೋಡಿಸಿ ಸಾಧ್ಯ ಇದ್ದರೆ ಎಂಬ ಮಾತನ್ನು ಹೇಳಿದ್ದೇನೆ. ಅದೂ ಕೂಡ ಕೋರ್ಟಿನಲ್ಲಿರುವುದರಿಂದ ಎಂದು ಹೇಳಿದ್ದೇನೆ. ಈಗಾಗಲೇ ಮಾಡಿಬಿಡುತ್ತೇನೆ. ಅವರ ಪರವಾಗಿ ಎಂದು ಹೇಳುವ ಸ್ಥಿತಿಯಲ್ಲಿ ನಾನಿಲ್ಲ. You please try to understand my position here, since the matters are pending before the High Court, I am sorry, I cannot vouch for that. I beg to differ from you. Not only that, ನೀವು ರಾಜಕೀಯ ಮಾಡುತ್ತೀರಿ, ಅನ್ಯಾಯವಾಗಿ ಸರ್ಕಾರಕ್ಕೆ ಕೆಟ್ಟ ಹೆಸರು ಬರುವ ಕೆಲಸ ನೀವು ಮಾಡುತ್ತೀರಿ ಎನ್ನುವ ಮಾತನ್ನು ನಾನು ಅಧ್ಯಕ್ಷರ ಮುಖಾಂತರ ಅನಿವಾರ್ಯವಾಗಿ ನಿಮಗೆ ಉತ್ತರ ಕೊಡಬೇಕಾಗುತ್ತದೆ. ಆದುದರಿಂದ ಹೇಳತಕ್ಕ ಧಾಟಿ, ಇಂಟೆನ್‌ಷನ್ ಅನ್ನು ಕ್ಲಿಯರ್ ಕಟ್ಟಾಗಿ ಇಟ್ಟುಕೊಂಡರೆ ಬಹಳ ಒಳ್ಳೆಯದು. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರೇ, ಈಗಲೂ ಸಹ ಮತ್ತೊಮ್ಮೆ ರಂಗನಾಥ್ ಅವರಿಗೆ, ಲಕ್ಕಪ್ಪಜೀ ಅವರಿಗೆ, ಯಡಿಯೂರಪ್ಪಜೀ ಅವರಿಗೆ ಹೇಳುತ್ತೇನೆ. ನಾನು ಇದಕ್ಕೆ ಗಮನ ಕೊಡುತ್ತೇನೆ. ನಾನು ತರಿಸಿ ನೋಡುತ್ತೇನೆ. ಸಾಧ್ಯ ಇದ್ದರೆ ಮಾಡುತ್ತೇನೆನ್ನುವ ಮಾತನ್ನು ಹೇಳಿದ್ದೇನೆ I will stand by that.

ಶ್ರೀ ಕೆ.ಹೆಚ್. ರಂಗನಾಥ್ : ರೂಲ್ 68 ಪ್ರಕಾರ ಇದು ಇಷ್ಟೇ

MR. SPEAKER : Rule 68 gets struck out at this point. But, any way Chief Minister has come out with a very positive attitude and the House should take note of that. ಒಂಭತ್ತನೇ ವಿಧಾನಸಭೆಯ ಐದನೇ ಅಧಿವೇಶನದ ಮುಂದುವರಿಸಿದ ಉಪವೇಶನದ ಕಾರ್ಯ ಕಲಾಪಗಳ ವರದಿಯನ್ನು ಕೊಡುವುದಕ್ಕೆ ಈಗಾಗಲೇ ಬಹಳ ತಡ ಆಗಿದೆ. ಅದನ್ನು ಇನ್ನೊಂದು ದಿವಸ ಕೊಡುತ್ತೇನೆ. ಸುಮಾರು 22 ದಿವಸಗಳ ಕಾಲ ಈ ಸದನ ನಡೆದು ಈಗ ನಾವು ಅನಿರ್ದಿಷ್ಟ ಕಾಲದವರೆಗೆ ಸಭೆಯನ್ನು ಮುಂದುವರಿಸತಕ್ಕ ಘಟ್ಟ ತಲುಪಿದ್ದೇವೆ. ಈ 22 ದಿವಸಗಳ ಕಾರ್ಯಕಲಾಪಗಳಲ್ಲಿ ನನಗೆ ಸಕ್ರೀಯವಾಗಿ ಸಹಕರಿಸಿ ಈ ಮಾನ್ಯ ಸಭೆಯ ಎಲ್ಲ ಸನ್ಮಾನ್ಯ ಸದಸ್ಯರುಗಳಿಗೆ, ಮುಖ್ಯಮಂತ್ರಿಯವರಿಗೆ,, ಮಂತ್ರಿಮಂಡಲದ ಸದಸ್ಯರಿಗೆ ಹಾಗೂ ಪತ್ರಕರ್ತರಿಗೆ, ಅಧಿಕಾರವರ್ಗದವರಿಗೆ ನನ್ನ ಅನಂತ ವಂದನೆಗಳನ್ನು..

ಶ್ರೀ ವಾಟಾಳ್ ನಾಗರಾಜ್ : ತಾವು ಹೇಳುವುದಕ್ಕಿಂತ ಮುಂಚೆ ಒಂದು ಮಾತನ್ನು ಹೇಳುತ್ತೇನೆ. ಈ ಸಭೆಯಲ್ಲಿ ಕಾಲಕ್ಕೆ ತಕ್ಕಂತೆ ಕುಳಿತುಕೊಳ್ಳತಕ್ಕ ನಾವು ಏಳೆಂಟು ಜನರಿದ್ದೇವೆ. ಇವರ ಬಗ್ಗೆ ನೀವು ಏನಾದರೂ ವಿಶೇಷವಾಗಿ ಗಮನಹರಿಸಬೇಕು. ಬೆಳಿಗ್ಗೆ ತಾವು ಬರುವುದನ್ನೇ ಕಾಯ್ದು ನಾವು ಕೂತಿರುತ್ತೇವೆ.

ಆಮೇಲೆ ನೀವು ಹೋಗಿ ಎಂದಾಗ ಹೋಗುತ್ತೇವೆ. ಈ ರೀತಿಯ 7-8 ಜನರಿಗೆ ಏನಾದರೂ ವಿಶೇಷ ವ್ಯವಸ್ಥೆ ಮಾಡುವುದಾದರೆ ನಾವು ಸಂತೋಷಪಡುತ್ತೇವೆ.

ಅಧ್ಯಕ್ಷರು : ಆ ಏಳೆಂಟು ಜನರಿಗೆ ಯಾವ ರೀತಿ ಪುರಸ್ಕಾರ ಮಾಡಬೇಕೆನ್ನುವ ಬಗ್ಗೆ ಒಂದು ಸದನ ಸಮಿತಿ ಮಾಡಿ ಅವರ ಶಿಫಾರಸ್ಸಿನ ಮೇಲೆ ಅವರಿಗೆ ಬಿರುದು, ಬಾವಲಿ, ಬಹುಮಾನ ಅಭಿನಂದನೆಗಳನ್ನು ಕಲ್ಪಿಸೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ಆ ಸಮಿತಿಯಲ್ಲಿ ಈ 8 ಜನರೇ ಸದಸ್ಯರಾಗಿರಬೇಕೋ ಅಥವಾ ಬೇರೆಯವರು ಇರಬೇಕೋ?

ಅಧ್ಯಕ್ಷರು : ಬೇರೆಯವರು ಇರಬೇಕು...

ಶ್ರೀ ಎಸ್. ಬಂಗಾರಪ್ಪ (ಸಭಾ ನಾಯಕರು) : ಮಾನ್ಯ ಅಧ್ಯಕ್ಷರೇ, ಈ ಬಡ್ಜೆಟ್ ಅಧಿವೇಶನ ಸಹಜವಾಗಿ ಬಲು ಉದ್ದ. ಅಷ್ಟೇ ಆ ಸಂದರ್ಭದಲ್ಲಿ ವಿಷಯಗಳ ಇತ್ಯರ್ಥ ಕೂಡ ನಮೂನೆಯಲ್ಲಿ ಬರತಕ್ಕದ್ದು ಸಹಜ. ಅದರಲ್ಲೂ ವಿರೋಧ ಪಕ್ಷದ ವತಿಯಿಂದ, ಕೆಲವು ಸಾರಿ ಈ ಸದನದ ಎಲ್ಲಾ ಮೂಲೆಗಳಿಂದ ಪ್ರಸ್ತಾಪಕ್ಕೆ ಬರುತ್ತವೆ. ತಾವಂತೂ ಕಾನೂನು ಚೌಕಟ್ಟಿನಲ್ಲಿ, ನಿಯಮಾವಳಿಗಳ ಚೌಕಟ್ಟಿನಲ್ಲಿ ವಿರೋಧ ಪಕ್ಷದ ನಾಯಕರ, ಇಲ್ಲಿ ಇರತಕ್ಕ ಎಲ್ಲಾ ರಾಜಕೀಯ ಪಕ್ಷಗಳ ವಿಶ್ವಾಸವನ್ನು ಸಹಕಾರವನ್ನು ಪಡೆದು ಬಹಳ ವ್ಯವಸ್ಥಿತವಾಗಿ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ತಮಗೆ ಸಾಧ್ಯವಾಗಿದೆ. ಇದಕ್ಕೆ ಸಹಕಾರ ಸದನದ ಎಲ್ಲಾ ಪ್ರತಿನಿಧಿಗಳಿಂದ ತಮಗೆ ಸಿಕ್ಕಿದೆ. ಇದು ನಮ್ಮ ಪರಂಪರೆಯೂ ಹೌದು, ನಮ್ಮ ಚರಿತ್ರೆಯೂ ಹೌದು. ಮುಂದೆ ಇದನ್ನೇ ಬೆಳೆಸಿಕೊಂಡು ಹೋಗಬೇಕಾಗುತ್ತದೆ. ಕೆಲವೊಮ್ಮೆ ಇಲ್ಲಿ ವಿಷಯ ಪ್ರಸ್ತಾಪ ಮಾಡಬೇಕಾದರೆ ಒಂದೊಂದು ಸಾರಿ ಗಲಾಟೆ ಆಗುತ್ತದೆ, ನೋವಾಗುತ್ತದೆ, ಚುಚ್ಚು ಮಾತುಗಳು ಬರುತ್ತದೆ. ಹಾಗೆಯೇ ಬಾವಿಗೆ ಹೋಗಿ ಕುಳಿತುಕೊಳ್ಳತಕ್ಕ ಸಂದರ್ಭ ಮತ್ತೆ ಅವರನ್ನು ಮೇಲಕ್ಕೆ ಎತ್ತತಕ್ಕ ಸಂದರ್ಭಗಳು ಹಿಂದೆಯೂ ಬಂದಿದ್ದು ಈಗಲೂ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ : ಎಷ್ಟೋ ಸಾರಿ ಮುಳುಗಿದ್ದೇವೆ, ಎಷ್ಟೋ ಸಾರಿ ಎದ್ದಿದ್ದೇವೆ.

ಶ್ರೀ ಎಸ್. ಬಂಗಾರಪ್ಪ : ಬಾವಿ ಇದ್ದಮೇಲೆ ಸ್ವಲ್ಪ ಮುಳುಗಲೇಬೇಕಾಗುತ್ತದೆ. ಮತ್ತೆ ಮೇಲೆ ಏಳಲೇಬೇಕಾಗುತ್ತದೆ. ಅದು ನಡೆದಿದೆ. ಅದು ಏನೇ ಇರಲಿ. ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಮಾನ್ಯ ವಿರೋಧಪಕ್ಷದ ಎಲ್ಲಾ ಮಿತ್ರರು ಎಲ್ಲರೂ ತಮ್ಮ ಸಹಕಾರವನ್ನು ಸ್ಪಷ್ಟವಾಗಿ ಈ ಸದನದಲ್ಲಿ ತಮಗೆ ಕೊಟ್ಟಿದ್ದಾರೆ. ಅದೇ ರೀತಿ ಎಲ್ಲ ಮಾನ್ಯ ಸದಸ್ಯರು ಆ ಕಡೆ ಈ ಕಡೆ ಇಲ್ಲಿ ಕುಳಿತಿರತಕ್ಕವರು ಹಲವಾರು ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಸಾಧ್ಯವಾಗಿದೆ. ಇನ್ನೂ ಕೆಲವು ವಿಚಾರಗಳನ್ನು ಕಾಲದ ಅಭಾವದಿಂದ ಚರ್ಚೆಮಾಡುವುದಕ್ಕೆ ಸಾಧ್ಯವಿಲ್ಲ, ಕೆಲವು ಸಾರಿ ರಾತ್ರಿ 9 ಗಂಟೆ 10 ಗಂಟೆಯವರೆಗೆ ತಾವು ಉಪಾಧ್ಯಕ್ಷಿಣಿಯವರು ಮತ್ತು ಬೇರೆ ಮಾನ್ಯ ಸದಸ್ಯರು ಇಲ್ಲಿ ಕುಳಿತು ಕೆಲಸವನ್ನು ಮಾಡಿದ್ದೇವೆ. ಈ ಸಂದರ್ಭದಲ್ಲಿ ಸಹಕಾರವನ್ನು ಕೊಟ್ಟಿರತಕ್ಕವರಿಗೆಲ್ಲರಿಗೂ ಸಹ ತಮ್ಮ ಮುಖಾಂತರ ಅಭಿನಂದನೆಯನ್ನು ಸಮರ್ಪಣೆ ಮಾಡುತ್ತಿದ್ದೇನೆ. ಈ ಸಂದರ್ಭದಲ್ಲಿ ನಾವು ಸಂಪೂರ್ಣ ಸಹಕಾರವನ್ನು ತಮಗೆ ಮತ್ತೊಮ್ಮೆ ಎಲ್ಲ

ವಿಧದಲ್ಲಿ ಕೂಡ ಕೊಡುತ್ತೇವೆ. ಒಂದೊಂದು ಸಾರಿ ತಾವು ಶಿವರಾಮೇಗೌಡರು ಹೆಸರು ತೆಗೆದುಕೊಂಡು ತಾವು ಮಾತನಾಡತಕ್ಕದ್ದು. ವಾಟಾಳ್ ನಾಗರಾಜ್‌ರವರ ವಿಚಾರವನ್ನು, ಇವತ್ತು ನನಗೆ ನಗು ತಡೆಯಲಿಕ್ಕೆ ಆಗಲಿಲ್ಲ. ಕಾನೂನು ಪುಸ್ತಕವೇ ಅವರಲ್ಲಿಗೆ ಹೋಗತಕ್ಕ ವ್ಯವಸ್ಥೆಯನ್ನು ತಾವೇನು ಮಾಡಿದ್ದೀರಿ ಅದು ನಿಜವಾಗಿಯೂ ಬಹಳ ಎತ್ತರಮಟ್ಟದ ಒಂದು ವಿಚಾರಧಾರೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಕಾನೂನು ಗೊತ್ತಿಲ್ಲದಿರತಕ್ಕ ನಮ್ಮಂತಹರವನ್ನು ಜನ ಚುನಾಯಿಸುತ್ತಾರೆ. ಅದಕ್ಕಾಗಿ ನಮಗೆ ಕಾನೂನು ಪುಸ್ತಕ ಕಳುಹಿಸಿದ್ದಾರೆ. ನೀವು ಕಾನೂನು ಪಂಡಿತರು ನಿಮ್ಮಂತಹ ಕಾನೂನು ಪಂಡಿತರು ಇದ್ದರೆ ಈ ದೇಶದ ಉದ್ಧಾರವಾಗುತ್ತದೆ ಸಂತೋಷ.

ಶ್ರೀ ಎಸ್. ಬಂಗಾರಪ್ಪ : ಇಷ್ಟನ್ನು ಹೇಳಿ, ನಿಜವಾಗಿಯೂ ತಾವು ಮಧ್ಯೆ ಮಧ್ಯೆ On the lighter side of the matter. ಕೆಲಸ ಮಾಡಿದ್ದೀರಿ. ಒಂದೊಂದು ಸಾರಿ ತಮ್ಮ ಒಪ್ಪಿಗೆ ಇದೆಯೆಂದು ತಿಳಿದು ನಾವು ಮಾತನಾಡಿರುತ್ತೇವೆ. ಆಗ ಏನಾದರೂ ತಮ್ಮ ಮನಸ್ಸಿಗೆ ನೋವಾಗಿದ್ದರೆ ಕ್ಷಮಿಸಿ. ಆದರೆ ಇಂಟೆನ್ಸೀವ್ ಆಗಿ ಮಾಡಬೇಕೆಂದು ಯಾವ ಸದಸ್ಯರಿಗೂ ಇಲ್ಲ. ಸರ್ವ ರೀತಿಯ ಸಹಕಾರವನ್ನು ಮತ್ತೆ ಮುಂದುವರಿಸಿಕೊಂಡು ಹೋಗುತ್ತೇವೆಂದು ನಾನು ಸಭಾ ನಾಯಕನಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಮ್ಮ ಮುಖಾಂತರ ಇಡೀ ಸದನಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ

ಶ್ರೀ ಡಿ.ಬಿ. ಚಂದ್ರೇಗೌಡ : (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಈ ಆಯವ್ಯಯ ಅಧಿವೇಶನದಲ್ಲಿ..,

ಶ್ರೀ ವಾಟಾಳ್ ನಾಗರಾಜ್: ಏತಕ್ಕೆ ಒಬ್ಬೊಬ್ಬರು ಆದಮೇಲೆ ಒಬ್ಬೊಬ್ಬರು ವಂದನಾರ್ಪಣೆ ಮಾಡುತ್ತಿದ್ದೀರಿ? ಏನಾಗಿದೆ, ಅಂತಹ ಅಚಾತುರ್ಯವೇನಾಗಿದೆ? ಇದು ನನಗೆ ಆಶ್ಚರ್ಯವಾಗುತ್ತಿದೆ. ಈಗ ನೀವು ಎದ್ದಿರಿ, ಆಮೇಲೆ ನಾನು ಏಳಬೇಕು, ಆಮೇಲೆ ಯಡಿಯೂರಪ್ಪನವರು ಹೇಳಬೇಕು. ಇದು ಶುರುವಾಗುತ್ತದೆ ಅದಕ್ಕೋಸ್ಕರ ಇದು ಬೇಡ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳುವುದೇನೆಂದರೆ ಈ ಆಯವ್ಯಯ ಅಧಿವೇಶನದಲ್ಲಿ ನಮ್ಮ ಕರ್ತವ್ಯವನ್ನು ನಾವು ಪರಿಪೂರ್ಣವಾಗಿ ಮಾಡಿದ್ದೇವೆನ್ನುವ ತೃಪ್ತಿ ಸಮಾಧಾನ ನನಗಂತೂ ಇಲ್ಲ. ಕಾರಣ ಇಷ್ಟೆ. ಒಟ್ಟು ರಾಜ್ಯದ ವ್ಯವಹಾರವನ್ನು ನೋಡಬೇಕಾದಂತಹ ನಾವು ಆ ವಿಚಾರವನ್ನು ಸರಿಯಾಗಿ ನಿರ್ವಹಿಸಿದ್ದೇವೆ ಎನ್ನುವ ತೃಪ್ತಿ ನನಗಂತೂ ಇಲ್ಲ. ಆ ವಿಚಾರಕ್ಕೆ ನಾನು ಹೆಚ್ಚು ಹೋಗುವುದಿಲ್ಲ. ಆದರೆ ಈ ಸಾರಿಯ ವೈಶಿಷ್ಟ್ಯ ಮತ್ತು ವಿಶೇಷತೆ ಏನೆಂದರೆ ನಾವು ಅನೇಕ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಸದನಕ್ಕೆ ತಮಗೆ ನಮಗೆ ತೃಪ್ತಿಯಾಗತಕ್ಕ ಪರಿಣಾಮಕಾರಿಯಾದ ಉತ್ತರ ಬಂದವು ಎಂದು ನಾವು ನಿರೀಕ್ಷೆ ಮಾಡುವುದು ತಪ್ಪು ಬಂದಿದೆಯೆಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ತಾವು ನಿರ್ವಹಣೆ ಮಾಡಿದಂತಹ ಕಾರ್ಯ ಎಲ್ಲರ ಮೆಚ್ಚಿಗೆಗೆ ಪಾತ್ರವಾಗಿದೆ. ಅನೇಕ ಸಂದರ್ಭಗಳಲ್ಲಿ ಸದನ ಇನ್ನೇನು ಬಹಳ ಕ್ಲಿಷ್ಟವಾದ ಸ್ಥಿತಿಗೆ ಹೋಗಬಹುದು ಎನ್ನತಕ್ಕ ಕಾಲದಲ್ಲಿ ಕೂಡ ಅದನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆಗೆ ತಂದು ಕಾರ್ಯ ನಿರ್ವಹಣೆ

ಮಾಡಿದ್ದೀರಿ. ಅದಕ್ಕಾಗಿ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಜೊತೆಯಲ್ಲಿ ನಮ್ಮ ಮತ್ತು ಅವರ ಸಂಖ್ಯೆಯನ್ನು ಸರಿಯಾಗಿ ತೂಕ ಮಾಡುವುದಕ್ಕೆ ಅವಕಾಶವಾಗಿಲ್ಲ. ಇನ್ನು ಹೆಚ್ಚು ಅವಕಾಶವನ್ನು ವಿರೋಧಪಕ್ಷದವರಿಗೆ ಕೊಡುವುದಕ್ಕೆ ಇನ್ನು ಮುಂದೆ ಮನಸ್ಸು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಮ್ಮ ಕಾರ್ಯ ನಿರ್ವಹಣೆಯಲ್ಲಿ ನಮ್ಮಿಂದೇನಾದರೂ ಸ್ವಲ್ಪ ಹೆಚ್ಚುಕಮ್ಮಿ ಆಗಿದ್ದರೆ ಕ್ಷಮಿಸಬೇಕು. ತಮಗೆ ಈ ಸಲ ಕೋಪ ಬರಲಿಲ್ಲ. ಎಲ್ಲೋ ಒಂದೇ ಸಾರಿ ಕೋಪ ಬಂತು. ಮತ್ತೆ ಆ ರೀತಿ ಕೋಪ ಬರದಹಾಗೆ ನೋಡಿಕೊಳ್ಳುತ್ತೇವೆಂದು ಹೇಳುತ್ತೇನೆ.

ಅಧ್ಯಕ್ಷರು : ಮನೆಯಲ್ಲಿ ಏನೋ ತೊಂದರೆಯಾಗಿತ್ತು ಎಂದು ಕಾಣುತ್ತದೆ. ಅದಕ್ಕೆ ನನಗೆ ಕೋಪ ಬಂದಿದೆ. ಈಗ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತೇನೆ.

ಸದನವು 6 ಗಂಟೆ 55 ನಿಮಿಷಗಳಿಗೆ ಮುಕ್ತಾಯವಾಯಿತು.

(ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)